Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 23-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

### ಕೋವಿಡ್ ಹರಡದಂತೆ ನಿಯಂತ್ರಿಸಲು ಮುಂಜಾಗ್ರತಾ ಕ್ರಮ • 15 ನಿಮಿಷದಲ್ಲೇ ವರದಿ

# ವಿಮಾನ ನಿಲ್ದಾಣದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ ಆರ್‌ಟಿ-ಪಿಸಿಆರ್ ಪರೀಕ್ಷೆ ಪ್ರಾರಂಭವಾಗಿದ್ದು, ಪರೀಕ್ಷಾ ವರದಿಗಳು 15 ನಿಮಿಷಗಳಲ್ಲೇ ಪ್ರಯಾಣಿಕರ ಕೈ ಸೇರಲಿವೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆಯು (ಬಿಐಎಎಲ್) ವಿಮಾನ ಹಾರಾಟ ಕಾರ್ಯಾಚರಣೆ ವೇಳೆ ಕೋವಿಡ್ ಹರಡದಂತೆ ನಿಯಂತ್ರಿಸಲು ಅನೇಕ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದೆ. ಈ ಸಲುವಾಗಿ ಆರಂಭಿಸಲಾದ ಕೋವಿಡ್ ಪರೀಕ್ಷಾ ಕೇಂದ್ರವನ್ನು ಅರಿಗಾ ರಿಸರ್ಚ್ ಸಂಸ್ಥೆಯು ನಿರ್ವಹಿಸುತ್ತಿದೆ.

'ಟರ್ಮಿನಲ್‌ನಲ್ಲಿ ಮಾದರಿ ಸಂಗ್ರಹಿಸುವ ಕಿಯಾಸ್ಕ್ ಇಡಲಾಗಿದೆ. ಅದರ ಹೊರ ಭಾಗದಲ್ಲಿ ಪ್ರಯೋಗಾಲಯವನ್ನು ನಿರ್ಮಿಸಲಾಗಿದೆ. ವಿವಿಧೆಡೆಯಿಂದ ಇಲ್ಲಿಗೆ ಬರುವ ಹಾಗೂ ಇಲ್ಲಿಂದ ಬೇರೆಡೆಗೆ ತೆರಳುವ ಪ್ರಯಾಣಿಕರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಪ್ರಯೋಗಾಲಯ ಸಹಕಾರಿಯಾಗಿದೆ' ಎಂದು ಬಿಐಎಲ್ ತಿಳಿಸಿದೆ.

'ಅಬೋಟ್ ಐಡಿ ನೌ ವಿಧಾನದ ಅಡಿಯಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಲಾಗುತ್ತಿದೆ. ಸಾಮಾನ್ಯವಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆಯ ವರದಿ ಪಡೆಯಲು ಅನೇಕ ದಿನಗಳು ಬೇಕಾಗುತ್ತವೆ. ಆದರೆ, ಅಬೋಟ್ ಐಡಿ ನೌ ವಿಧಾನದಲ್ಲಿ ನಡೆಸುವ ಪರೀಕ್ಷೆಯ ಫಲಿತಾಂಶವನ್ನು ಕೇವಲ 15 ನಿಮಿಷಗಳೊಳಗೆ ನೀಡಲಾಗುತ್ತದೆ. ಇದರಿಂದ ಪರೀಕ್ಷೆಗೆ ಒಳಪಟ್ಟವರು ಕಾಯುತ್ತಾ ಕುಳಿತುಕೊಳ್ಳುವುದು ತಪ್ಪಲಿದೆ. ಡಿಜಿಟಲ್ ಮಾದರಿಯಲ್ಲಿ ಪರೀಕ್ಷೆಯ ವರದಿಯನ್ನು ನೀಡಲಾಗುವುದು. ಫಲಿತಾಂಶಗಳನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ವೆಬ್‌ಸೈಟ್‌ನಲ್ಲಿ ಸೋಂದಣಿ ಮಾಡಲಾಗುವುದು' ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.



ಬಿಬಿಎಂಪಿ ವೈದ್ಯಕೀಯ ಸಿಬ್ಬಂದಿ ಕೋವಿಡ್–19 ಪರೀಕ್ಷೆ ನಡೆಸುತ್ತಿರುವುದು

### ವಿಮಾನ ನಿಲ್ದಾಣ: ಕೋವಿಡ್ ಪರೀಕ್ಷಾ ದರ ಪಟ್ಟಿ

| ಪರೀಕ್ಷಾ ವಿಧಾನ | ದರ | ವರದಿ ಪಡೆಯಲು ತಗಲುವ ಸಮಯ |
|---|---|---|
| ಆರ್‌ಟಿ–ಪಿಸಿಆರ್ ಕ್ಷಿಪ್ರ ಪರೀಕ್ಷೆ | ₹2,400 | 13 ನಿಮಿಷಗಳು |
| ಆರ್‌ಟಿ–ಪಿಸಿಆರ್ (ಸ್ಪೆಷಲ್ ಟರ್ನ್ ಅರೌಂಡ್) | ₹2,500 | 5ರಿಂದ 6 ಗಂಟೆಗಳು |
| ಆರ್‌ಟಿ–ಪಿಸಿಆರ್ (ಸಾಮಾನ್ಯ) | ₹800 | 24 ಗಂಟೆಗಳು |
| ವಿಮಾನ ನಿಲ್ದಾಣದ ಆಸ್ಟರ್ ವೈದ್ಯಕೀಯ ಕೇಂದ್ರ | ₹1,200 | 24 ಗಂಟೆಗಳು |

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**3,83,816** ಒಟ್ಟು ಸೋಂಕಿತರು

**3,70,387** ಗುಣಮುಖರಾದವರು

**9,148** ಸಕ್ರಿಯ ಪ್ರಕರಣ




**ಮಂಗಳವಾರದ ಏರಿಕೆ**

**585** ದೃಢಪಟ್ಟ ಪ್ರಕರಣ

**686** ಗುಣಮುಖ | **8** ಸಾವು

## ಸೋಂಕಿತರ ಸಂಖ್ಯೆ ಏರಿಕೆ

ಬೆಂಗಳೂರು: ಬೆಂಗಳೂರಿನಲ್ಲಿ 585 ಸೇರಿದಂತೆ ರಾಜ್ಯದಲ್ಲಿ ಮಂಗಳವಾರ 1,141 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.11 ಲಕ್ಷ ದಾಟಿದೆ.

ಈ ತಿಂಗಳು 22 ದಿನಗಳಲ್ಲಿ 26,486 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 1,203 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಒಂದೇ ದಿನ 82 ಸಾವಿರ ಆರ್‌ಟಿ–ಪಿಸಿಆರ್ ಸೇರಿದಂತೆ 95 ಸಾವಿರ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.32 ಕೋಟಿ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಕೋವಿಡ್ ಪೀಡಿತರಲ್ಲಿ 1,136 ಮಂದಿಗೆ ಕಾಯಿಲೆ ವಾಸಿಯಾಗಿದ್ದು, ಇದರಿಂದಾಗಿ ಚೇತರಿಸಿಕೊಂಡವರ ಸಂಖ್ಯೆ 8.85 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 13,993 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 216 ಮಂದಿ ತೀವ್ರ ನಿಗಾ ಘಟಕದಲ್ಲಿದ್ದಾರೆ. ರಾಜ್ಯದ ಜ್ವರ ಚಿಕಿತ್ಸಾಲಯಗಳಲ್ಲಿ 32.85 ಲಕ್ಷ ಮಂದಿಯನ್ನು ತಪಾಸಣೆಗೆ ಒಳಪಡಿಸಲಾಗಿದೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ 3.83 ಲಕ್ಷ ದಾಟಿದೆ.

## ಅಂಗಡಿ ಮುಂದೆ ಅಂತರ ಗುರುತು ಕಡ್ಡಾಯ: ಆರೋಗ್ಯ ಇಲಾಖೆ ಸೂಚನೆ

ಬೆಂಗಳೂರು: ಕೋವಿಡ್ ಕಾರಣ ಎಲ್ಲ ವಾಣಿಜ್ಯ ಮಳಿಗೆಗಳು ಕಡ್ಡಾಯವಾಗಿ 6 ಅಡಿ ಅಂತರದಲ್ಲಿ ಚೌಕಾಕಾರ ಅಥವಾ ವೃತ್ತಾಕಾರದ ಗುರುತುಗಳನ್ನು ಹಾಕಿ, ಗ್ರಾಹಕರು ಅಂತರ ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಮಾರುಕಟ್ಟೆಗಳಲ್ಲಿ ಸೋಂಕು ಹರಡುವಿಕೆ ತಡೆಗೆ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಇಲಾಖೆ ಸುತ್ತೋಲೆ ಹೊರಡಿಸಿದೆ.

ಅಂಗಡಿ ಹಾಗೂ ಮಾರುಕಟ್ಟೆಗಳಲ್ಲಿ ಮುಖಗವಸು ಧರಿಸುವುದು, ಅಂತರ ಕಾಯ್ದುಕೊಳ್ಳುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ದೈನಂದಿನ ಚಟುವಟಿಕೆ ಪ್ರಾರಂಭಿಸುವ ಮುನ್ನ ಶೇ 1 ರಷ್ಟು ಪ್ರಮಾಣದಲ್ಲಿ ಸೋಡಿಯಂ ನೈಟ್ರೇಟ್ ದ್ರಾವಣದಿಂದ ಅಥವಾ ಗ್ರಹ ಬಳಕೆಯ ಮಾರ್ಜಕದಿಂದ ಮಳಿಗೆಗಳನ್ನು ಸ್ವಚ್ಛಪಡಿಸಲು ಮಾಲೀಕರು ಕ್ರಮವಹಿಸಬೇಕು. ಪ್ರವೇಶ ದ್ವಾರದಲ್ಲಿಯೇ ಸೋಂಕು ನಿವಾರಕ ದ್ರಾವಣ (ಸ್ಯಾನಿಟೈಸರ್) ಇಡಬೇಕು ಎಂದು ತಿಳಿಸಲಾಗಿದೆ.

ನಿಯಮ ಪಾಲಿಸದಿದ್ದಲ್ಲಿ ದಂಡ: ಮುಖಗವಸನ್ನು ಖರೀದಿಸಲು ಸಾಧ್ಯವಾಗದವರಿಗೆ ಉಚಿತವಾಗಿ ಮುಖಗವಸುಗಳನ್ನು ನೀಡುವುದು ಮತ್ತು ಅದನ್ನು ಬಳಸಲು ಮಾಲೀಕರು ಉತ್ತೇಜಿಸಬೇಕು. ಮಾರುಕಟ್ಟೆ ಪ್ರವೇಶದ್ವಾರಗಳಲ್ಲಿ ಸಾಮೂಹಿಕ ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆಯಾಗಬೇಕು. ನಿಯಮಗಳು ಪಾಲನೆಯಾಗದಿದ್ದಲ್ಲಿ ಮಾಲೀಕರಿಗೆ ದಂಡ ವಿಧಿಸಲಾಗುವುದು. ಹೆಚ್ಚಿನ ಪ್ರಕರಣಗಳು ವರದಿಯಾದಲ್ಲಿ ಮಾರುಕಟ್ಟೆ ಮುಚ್ಚಲಾಗುವುದು ಎಂದು ಎಚ್ಚರಿಸಲಾಗಿದೆ. ಸಾರ್ವಜನಿಕವಾಗಿ ಜನದಟ್ಟಣೆ ಆಗದಂತೆ ನೋಡಿಕೊಳ್ಳಲು ಮಾರ್ಷಲ್‌ಗಳು, ಗೃಹರಕ್ಷಕ ದಳಗಳು ಮತ್ತು ಸ್ವಯಂ ಸೇವಕರ ಸೇವೆ ಬಳಸಿಕೊಳ್ಳಬೇಕು. ದೈನಂದಿನ ಬಳಕೆಯ ವಸ್ತುಗಳ ಖರೀದಿಗೆ ಆನ್‌ಲೈನ್ ವ್ಯವಸ್ಥೆಯನ್ನು ಉತ್ತೇಜಿಸಬೇಕು. ಸರ್ಕಾರದ ಮಾರ್ಗಸೂಚಿಗಳನ್ನು ಮಾಲೀಕರು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ಮಹಿಳೆಗೆ ಅವಾಚ್ಯ ಶಬ್ದಗಳಿಂದ ನಿಂದನೆ, ಜೀವ ಬೆದರಿಕೆ ಆರೋಪ

# ಮಾಜಿ ಕಾರ್ಪೊರೇಟರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳೆಯೊಬ್ಬರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿರುವ ಆರೋಪದಡಿ ಪಾಲಿಕೆಯ ಮಾಜಿ ಸದಸ್ಯ ಧನರಾಜ್ ಎಂಬುವರ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪೂಜಾ ಅಗರ್ವಾಲ್ ಎಂಬುವರು ದೂರು ನೀಡಿದ್ದಾರೆ. ಧರ್ಮರಾಯ ದೇವಸ್ಥಾನ ವಾರ್ಡ್‌ನ ಮಾಜಿ ಕಾರ್ಪೊರೇಟರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪೈಪ್‌ಗಳ ಖರೀದಿಗಾಗಿ ಧನರಾಜ್ ಅವರು ಸೋಮವಾರ ಮಧ್ಯಾಹ್ನ ಲಾಲ್‌ಬಾಗ್ ರಸ್ತೆಯಲ್ಲಿರುವ ಕೊಲ್ಕತ್ತಾ ಟ್ಯೂಬ್ ಮಳಿಗೆಗೆ ಹೋಗಿದ್ದರು. ಪೈಪ್‌ಗಳ ದರಪಟ್ಟಿ ಕೇಳಿದ್ದರು. ಅಂಗಡಿ ಮಾಲೀಕ ಸಾವರ್‌ಮಲ್ ಅಗರ್ವಾಲ್, ಚೀಟಿಯಲ್ಲಿ ಪೈಪ್‌ಗಳ ದರ ಬರೆದುಕೊಟ್ಟಿದ್ದರು.'

'ಪೈಪ್‌ಗಳ ದರ ದುಬಾರಿ ಆಯಿತೆಂದು ತಗಾದೆ ತೆಗೆದಿದ್ದ ಧನರಾಜ್, 'ಬೇರೆ ಮಳಿಗೆಗಳಲ್ಲಿ ಕಡಿಮೆ ದರವಿದೆ. ನಿಮ್ಮ ಅಂಗಡಿಯಲ್ಲಿ ಏಕೆ ಹೆಚ್ಚಿನ ದರ' ಎಂದು ಪ್ರಶ್ನಿಸಿದ್ದರು. ಅದೇ ವಿಚಾರವಾಗಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಧ್ಯಪ್ರವೇಶಿಸಿದ್ದ ಸಾವರ್‌ಮಲ್ ಅವರ ಸೊಸೆ ಪೂಜಾ ಅಗರ್ವಾಲ್, 'ಗಲಾಟೆ ಮಾಡಬೇಡಿ' ಎಂದಿದ್ದರು. ಪೂಜಾ ಅವರ ಮೇಲೆಯೇ ಹರಿಹಾಯ್ದಿದ್ದ ಧನರಾಜ್, ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ತಮ್ಮ ವಿರುದ್ಧದ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಧನರಾಜ್, 'ಪೈಪ್ ಖರೀದಿಸಲು ಮಳಿಗೆಗೆ ಹೋಗಿದ್ದೆ. ಹೆಚ್ಚಿನ ಬೆಲೆ ಹೇಳಿದ್ದರಿಂದ ಪ್ರಶ್ನೆ ಮಾಡಿದೆ. ಅಷ್ಟಕ್ಕೆ ನನ್ನ ಬಳಿ ಇದ್ದ ದರಪಟ್ಟಿ ಚೀಟಿಯನ್ನು ಮಾಲೀಕರು ಹರಿದರು. ಕೇಳಿದ್ದಕ್ಕೆ, ಅವರ ಸೊಸೆಯೂ ನನ್ನ ಜೊತೆ ಜಗಳಕ್ಕೆ ಬಂದಿದ್ದರು. ನಾನು ಯಾರಿಗೂ ನಿಂದಿಸಿಲ್ಲ. ಬೆದರಿಕೆಯನ್ನೂ ಹಾಕಿಲ್ಲ. ಇದೀಗ ನನ್ನ ವಿರುದ್ಧವೇ ಅವರು ದೂರು ನೀಡಿದ್ದಾರೆ. ನಾನು ಕೂಡ ಪ್ರತಿ ದೂರು ನೀಡುತ್ತೇನೆ' ಎಂದು ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್‌ಗೆ ಕೊರೊನಾ ಸೋಂಕು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರಿಗೆ ಕೋವಿಡ್ ದೃಢಪಟ್ಟಿದೆ. ಆಯುಕ್ತರು ನಿತ್ಯವೂ ಅನೇಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿರುತ್ತಾರೆ. ಇತ್ತೀಚೆಗೆ ಅವರ ಸಂಪರ್ಕಕ್ಕೆ ಬಂದವರು ಕೂಡಾ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ಪಾಲಿಕೆ ಸಾರ್ವಜನಿಕರಲ್ಲಿ ಕೋರಿದೆ.

ಮಂಜುನಾಥ ಅವರಿಗೆ ಸೋಮವಾರ ಅಲ್ಪಪ್ರಮಾಣದಲ್ಲಿ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಹಾಗಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದರು. ಸೋಂಕು ತಗುಲಿರುವುದು ಮಂಗಳವಾರ ದೃಢಪಟ್ಟಿತ್ತು. ಅವರು ಮಲ್ಲಿಗೆ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾಸದಲ್ಲಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.



ಮಂಜುನಾಥ

**ವಿವಿಧ ಕಾರ್ಯಕ್ರಮದಲ್ಲಿ ಭಾಗಿ:** ಜನಾಗ್ರಹ ಸಂಸ್ಥೆ ಸೋಮವಾರ ಹಮ್ಮಿಕೊಂಡಿದ್ದ 'ಮೈ ಸಿಟಿ ಮೈ ಬಜೆಟ್' ಕಾರ್ಯಕ್ರಮದಲ್ಲಿ ಆಯುಕ್ತರು ಭಾಗವಹಿಸಿದ್ದರು. ಬಳಿಕ ವಿವಿಧ ಸಭೆಗಳನ್ನು ನಡೆಸಿದ್ದರು. ಕೋವಿಡ್ ವಾರ್ ರೂಂನಲ್ಲಿ ರಾತ್ರಿ 7.30ರವರೆಗೂ ಇದ್ದರು.

'ಫಿಟ್ ಇಂಡಿಯಾ' ಅಭಿಯಾನದ ಅಂಗವಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸೈಕ್ಲಥಾನ್ ಕಾರ್ಯಕ್ರಮದಲ್ಲೂ ಅವರು ಭಾಗವಹಿಸಿದ್ದರು. ಸೈಕಲ್ ಜಾಥಾದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ, ಬೆಂಗಳೂರು ಸ್ಮಾರ್ಟ್ ಸಿಟಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಮಕ್ಕಳನ್ನು ಭಿಕ್ಷಾಟಣೆಗೆ ಬಳಸುತ್ತಿರುವುದರ ಕುರಿತು ಸಮೀಕ್ಷೆ ನಡೆಸುವ ಬಗ್ಗೆ ಶುಕ್ರವಾರ ಸಭೆ ನಡೆಸಿದ್ದರು.

'ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಾಗೂ ಸಭೆಗಳನ್ನು ನಡೆಸುವಾಗ ಆಯುಕ್ತರು ಇತರರ ಜೊತೆಗೆ ಅಂತರ ಕಾಪಾಡಿದ್ದರು ಹಾಗೂ ಮಾಸ್ಕ್ ಧರಿಸಿದ್ದರು. ಆದರೂ ನಾಲ್ಕೈದು ದಿನಗಳಿಂದ ಆಯುಕ್ತರ ಜೊತೆ ನೇರ, ಪರೋಕ್ಷ ಸಂಪರ್ಕಕ್ಕೆ ಬಂದವರು ತಪಾಸಣೆ ಮಾಡಿಸಿಕೊಳ್ಳಬೇಕಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನೂ ಆಯುಕ್ತರು ಭಾನುವಾರ ಭೇಟಿ ಮಾಡಿದ್ದರು. ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಜೊತೆಗೆ ಕಳೆದ ವಾರ ಕೆಲವು ಸಭೆಗಳಲ್ಲಿ ಭಾಗವಹಿಸಿದ್ದರು.

ಕನ್ನಡಪ್ರಭ

# ಹೊಸ ವೈರಾಣು: ಬ್ರಿಟನ್‌ನಿಂದ ನಗರಕ್ಕೆ ಬಂದವರಿಗೆ ಪರೀಕ್ಷೆ

## ಈವರೆಗೆ 211 ಮಂದಿ ಗುರುತು ಪತ್ತೆ | 184 ಮಂದಿಗೆ ಆರ್‌ಟಿಪಿಸಿಆರ್ ಟೆಸ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನಲ್ಲಿ ಕೊರೋನಾ ಸೋಂಕಿನ ಹೊಸ ವೈರಾಣು ಪತ್ತೆಯಾದ ಹಿನ್ನೆಲೆಯಲ್ಲಿ ಬ್ರಿಟನ್‌ನಿಂದ ನಗರಕ್ಕೆ ಬಂದವರ ಪತ್ತೆಗೆ ಆರೋಗ್ಯ ಇಲಾಖೆ ಮುಂದಾಗಿದ್ದು, ಈವರೆಗೆ ನಗರಕ್ಕೆ ಹಿಂದಿರುಗಿರುವ 211 ಮಂದಿ ಪತ್ತೆ ಹಚ್ಚಿರುವ ಇಲಾಖೆ, ಈ ಪೈಕಿ 184 ಮಂದಿಯನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಿದೆ.

ಕಳೆದ ಎರಡು ವಾರಗಳಲ್ಲಿ ಬ್ರಿಟನ್‌ನಿಂದ ನಗರಕ್ಕೆ ಸುಮಾರು ಒಂದು ಸಾವಿರಕ್ಕೂ ಅಧಿಕ ಮಂದಿ ಬಂದಿದ್ದಾರೆ ಎಂದು ಅಂದಾಜಿಸಲಾಗಿದೆ. ಸದ್ಯಕ್ಕೆ 211 ಮಂದಿ ಪತ್ತೆಯಾಗಿದ್ದು, ಉಳಿದವರ ಪತ್ತೆಗೆ ಆರೋಗ್ಯ ಇಲಾಖೆ ತಂಡಗಳು ಕಾರ್ಯಾಚರಣೆಗೆ ಇಳಿದಿವೆ. ಸದ್ಯ ಪತ್ತೆಯಾಗಿರುವ ಪ್ರಯಾಣಿಕರ ಪೈಕಿ ಪಾಲಿಕೆಯ ಪೂರ್ವ ವಲಯದಲ್ಲೇ 48 ಮಂದಿ ಪತ್ತೆಯಾಗಿದ್ದಾರೆ. ಉಳಿದಂತೆ ಮಹದೇವಪುರ ವಲಯ 40, ಬೊಮ್ಮನಹಳ್ಳಿ ವಲಯ 38, ದಕ್ಷಿಣ ವಲಯ 29, ಪಶ್ಚಿಮ ವಲಯ 27, ಯಲಹಂಕ ವಲಯ 14, ಆರ್.ಆರ್.ನಗರ ವಲಯ 13 ಹಾಗೂ ದಾಸರಹಳ್ಳಿ ವಲಯ 2 ಮಂದಿ ಪತ್ತೆಯಾಗಿದ್ದಾರೆ. ಪರೀಕ್ಷೆ ಒಳಪಡಿಸಲಾಗಿರುವ ಪ್ರಯಾಣಿಕರನ್ನು ಸದ್ಯ ಹೋಂ ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ. ಪರೀಕ್ಷೆಯ ವರದಿಯಲ್ಲಿ ಸೋಂಕು ದೃಢಪಟ್ಟರೆ ಆಸ್ಪತ್ರೆಯಲ್ಲಿ ಐಸೊಲೇಷನ್ ಮಾಡಲಾಗುತ್ತದೆ. ಅಂತೆಯೆ ಸೋಂಕಿತರ ಸಂಪರ್ಕಿತರ ಮಾಹಿತಿ ಪಡೆದು ಅವರನ್ನೂ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲು ಆರೋಗ್ಯ ಇಲಾಖೆ ಯೋಜನೆ ರೂಪಿಸಿದೆ.

### 585 ಮಂದಿಗೆ ಕೊರೋನಾ ಸೋಂಕು

ನಗರದಲ್ಲಿ ಮಂಗಳವಾರ 585 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 686 ಮಂದಿ ಗುಣಮುಖರಾಗಿದ್ದಾರೆ. ಎಂಟು ಮಂದಿ ಮೃತಪಟ್ಟ ವರದಿಯಾಗಿದೆ.

ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,83,816ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,70,387ಕ್ಕೆ ತಲುಪಿದೆ. ನಗರದಲ್ಲಿ ಇನ್ನೂ 9,148 ಸಕ್ರಿಯ ಪ್ರಕರಣಗಳಿದ್ದು, ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಪೈಕಿ 101 ಮಂದಿ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಎಂಟು ಸಾವು: ನಗರದಲ್ಲಿ ಕೊರೋನಾ ಸಾವಿನ ಸಂಖ್ಯೆ ಏರಿಕೆಯಾಗಿದ್ದು, ಮಂಗಳವಾರ ಎಂಟು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ಸಾವಿನ ಸಂಖ್ಯೆ 4,286ಕ್ಕೆ ಏರಿಕೆಯಾಗಿದೆ. 6.62 ಕೋಟಿ ದಂಡ: ನಗರದಲ್ಲಿ ಮಾಸ್ಕ್ ಧರಿಸದ ಹಾಗೂ ಸಾಮಾಜಿಕ ಅಂತರ ಪಾಲಿಸದೇ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ 2,88,782 ಮಂದಿಯಿಂದ ₹6.62 ಕೋಟಿ ದಂಡ ವಸೂಲಿ ಮಾಡಲಾಗಿದೆ.

# ಏರ್‌ಪೋರ್ಟ್‌ನಲ್ಲಿ ಎಕ್ಸ್‌ಪ್ರೆಸ್ ಟೆಸ್ಟ್: 13 ನಿಮಿಷದಲ್ಲಿ ವರದಿ

## ಅತ್ಯಾಧುನಿಕ ಲ್ಯಾಬಲ್ಲಿ ₹2400 ಶುಲ್ಕ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇವಲ 13 ನಿಮಿಷದಲ್ಲಿ ಕೊರೋನಾ ಸೋಂಕು ಪರೀಕ್ಷೆಯ ಫಲಿತಾಂಶದ ವರದಿ ನೀಡುವ 'ಆ್ಯಬಾಟ್ ಐಡಿ ನೌ' (ರ‍್ಯಾಪಿಡ್ ಪಿಸಿಆರ್) ಎಂಬ ವ್ಯವಸ್ಥೆಯನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಲ್ಪಿಸಲಾಗಿದೆ.

ಬೆಂಗಳೂರು ಮೂಲದ 'ಆರಿಗಾ ರಿಸರ್ಚ್ ಪ್ರೈವೆಟ್ ಲಿಮಿಟೆಡ್' ಸಹಯೋಗದಲ್ಲಿ ಈ ಪ್ರಯೋಗಾಲಯ ಆರಂಭಿಸಲಾಗಿದೆ. ಈ ಸಂಸ್ಥೆಯು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಪರೀಕ್ಷೆಗಾಗಿ ಕಿಯೋಸ್ಕ್ ತೆರೆದಿದ್ದು, ಟರ್ಮಿನಲ್ ಹೊರಭಾಗದಲ್ಲಿ ಅತ್ಯಾಧುನಿಕ ಪ್ರಾಯೋಗಾಲಯ ಆರಂಭಿಸಿದೆ. ಪ್ರಯಾಣಿಕರು ವಿಮಾನ ಪ್ರಯಾಣಕ್ಕೂ ಮುನ್ನ ಅಥವಾ ವಿದೇಶದಿಂದ ಬರುವ ಪ್ರಯಾಣಿಕರು ಈ ಪರೀಕ್ಷೆಗೆ ಒಳಗಾಗಬಹುದು. ದಿನದ 24 ತಾಸು ಈ ಸೇವೆ ಲಭ್ಯವಾಗಲಿದೆ. ಪ್ರಯಾಣಿಕರು ಈ ಪರೀಕ್ಷೆಗೆ ಒಳಗಾಗಲು ಆನ್‌ಲೈನ್‌ನಲ್ಲಿ ಮುಂಗಡವಾಗಿ ಸಮಯ ನಿಗದಿಪಡಿಸಲು ಅವಕಾಶ ಕಲ್ಪಿಸಲಾಗಿದೆ. ಈ ಪರೀಕ್ಷೆಗೆ ಒಳಗಾದ ಕೇವಲ 13 ನಿಮಿಷಗಳಲ್ಲಿ ಪರೀಕ್ಷೆಯ ವರದಿ ಪ್ರಯಾಣಿಕರ ಕೈ ಸೇರಲಿದೆ. ಈ ರ‍್ಯಾಪಿಡ್ ಪಿಸಿಆರ್ ಪರೀಕ್ಷೆಗೆ ₹2,400 ದರ ನಿಗದಿಗೊಳಿಸಲಾಗಿದೆ.

ಅಂತೆಯೆ ಈ ಕೊರೋನಾ ಸೋಂಕು ಪರೀಕ್ಷಾ ಕೇಂದ್ರದಲ್ಲಿ ಸಾಮಾನ್ಯ ಆರ್‌ಟಿಪಿಸಿಆರ್ ಪರೀಕ್ಷೆಯನ್ನೂ ಮಾಡಲಾಗುತ್ತದೆ. ಈ ಪರೀಕ್ಷೆಗೆ ₹800 ದರ ನಿಗದಿಗೊಳಿಸಿದ್ದು, 24 ತಾಸಿನಲ್ಲಿ ಪರೀಕ್ಷೆಯ ಫಲಿತಾಂಶ ಲಭ್ಯವಾಗಲಿದೆ ಎಂದು ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಬಿಐಎಎಲ್) ತಿಳಿಸಿದೆ.

ಕನ್ನಡಪ್ರಭ

## ಸಣ್ ಸುದ್ದಿ

# ಬಿಬಿಎಂಪಿಗೆ ಹೆಚ್ಚುವರಿ ಪೌರಕಾರ್ಮಿಕರ ನೇಮಕಕ್ಕೆ ಸೂಚನೆ

**ಬೆಂಗಳೂರು:** ಬಿಬಿಎಂಪಿಗೆ ಹೊಸದಾಗಿ 2,880 ಹೆಚ್ಚುವರಿ (ಶೇಕಡ 16)ರಷ್ಟು ಪೌರಕಾರ್ಮಿಕರ ನೇಮಕಾತಿ ಮಾಡಿಕೊಳ್ಳಲು ಬಿಬಿಎಂಪಿ ಆಯುಕ್ತರು ನಿರ್ದೇಶಿಸಿದ್ದಾರೆ. ನಗರದಲ್ಲಿ ಕಸ ವಿಲೇವಾರಿಯಲ್ಲಿ ಜವಾಬ್ದಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಬಿಲ್ ಪಾವತಿ ಹಾಗೂ ಪೌರಕಾರ್ಮಿಕರ ಕುಂದುಕೊರತೆ ಸಂಬಂಧಿಸಿದಂತೆ ಇತ್ತೀಚೆಗೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್, ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಿ.ರಂದೀಪ್ ಘನತ್ಯಾಜ್ಯ ವಿಲೇವಾರಿ ಗುತ್ತಿಗೆದಾರರೊಂದಿಗೆ ಸಭೆ ನಡೆಸಿದರು. ಈ ಸಭೆಯಲ್ಲಿ ಈ ತೀರ್ಮಾನ ಮಾಡಲಾಗಿದೆ. ಕಾರ್ಮಿಕ ಇಲಾಖೆಯ ನಿಯಮಾನುಸಾರ ವಾರಕ್ಕೆ ಒಂದು ದಿನ ಬಿಡುವು, ಸರ್ಕಾರಿ ರಜೆ ಸೇರಿ 10 ದಿನ ಕಡ್ಡಾಯ ರಜೆ ನೀಡಬೇಕಾಗುತ್ತದೆ. ಈ ಸೌಲಭ್ಯವನ್ನು ಪೌರ ಕಾರ್ಮಿಕರಿಗೆ ನೀಡಲು ಹೆಚ್ಚುವರಿ ನೇಮಕಾತಿ ಅಗತ್ಯರುವ ಹಿನ್ನೆಲೆಯಲ್ಲಿ ಪ್ರಕ್ರಿಯೆ ಆರಂಭಿಸುವಂತೆ ಅಧಿಕಾರಿಗಳಿಗೆ ಮಂಜುನಾಥ್ ಪ್ರಸಾದ್ ಸೂಚನೆ ನೀಡಿದ್ದಾರೆ. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೋಟೆಲ್, ರೆಸ್ಟೋರೆಂಟ್, ಮಾಲ್, ಆಸ್ಪತ್ರೆ ಸೇರಿದಂತೆ ಇನ್ನಿತರೆ ಸಗಟು ತ್ಯಾಜ್ಯ ಉತ್ಪಾದಕರಿಂದ ಮನೆ ಕಸ ಸಂಗ್ರಹಿಸುವ ವಾಹನಗಳಲ್ಲಿ ಸಂಗ್ರಹ ಮಾಡುವಂತಿಲ್ಲ ಎಂದರು.

VK
ವಿಜಯ ಕರ್ನಾಟಕ

### ವನ್ಯಜೀವಿ ಪರಿಪಾಲಕರಿಂದ ಬೇಡಿಕೆ | ನಿವಾಸಿಗಳಿಂದಲೇ ವೆಚ್ಚ ವಸೂಲು ಮಾಡಲು ಅರಣ್ಯ ಇಲಾಖೆ ಆದೇಶ

# ಕೋತಿ ಹಿಡಿಯಲು ಲಕ್ಷ ಲಕ್ಷ ಕೊಡಬೇಕು!

■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesgroup.com

ಮಲೆನಾಡು, ಕರಾವಳಿಯಲ್ಲಷ್ಟೇ ಅಲ್ಲ; ರಾಜಧಾನಿಯಲ್ಲೂ ಮಂಗಗಳ ಹಾವಳಿ ಮಿತಿ ಮೀರಿದೆ. ವಾನರ ಸೇನೆಯನ್ನು ಸೆರೆ ಹಿಡಿದು ವಸತಿ ಪ್ರದೇಶಗಳಿಂದ ಅರಣ್ಯಕ್ಕೆ ಸ್ಥಳಾಂತರಿಸಲು ಕೆಲ ವನ್ಯಜೀವಿ ಪರಿಪಾಲಕರು ಲಕ್ಷಾಂತರ ರೂ.ಗಳಿಗೆ ಬೇಡಿಕೆ ಇಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ.

ನಗರದ ದೊಡ್ಡಕಲ್ಲಸಂದ್ರ, ಸರ್ಜಾಪುರ, ವಿದ್ಯಾರಣ್ಯಪುರ, ಬಸವನಗುಡಿ, ವಿಲ್ಸನ್ ಗಾರ್ಡನ್, ಆರ್.ಟಿ.ನಗರ ಸೇರಿದಂತೆ ಹಲವೆಡೆ ಕೋತಿಗಳ ಕಾಟ ವಿಪರೀತವಾಗಿದೆ.

ಬಿಬಿಎಂಪಿ ಮತ್ತು ಅರಣ್ಯ ಇಲಾಖೆಯ ವನ್ಯಜೀವಿ ಘಟಕವು ಮಂಗಗಳ ಉಪಟಳಕ್ಕೆ ಕಡಿವಾಣ ಹಾಕಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇದನ್ನೇ ಬಂಡವಾಳವಾಗಿಸಿ ಕೊಂಡಿರುವ ಕೆಲ ವನ್ಯಜೀವಿ ಪರಿಪಾಲಕರು ವಾನರ ಗುಂಪನ್ನು ಸೆರೆ ಹಿಡಿದು ಸ್ಥಳಾಂತರಿಸಲು ಲಕ್ಷಾಂತರ ರೂ. ಕೇಳುತ್ತಿದ್ದಾರೆ. ಹೀಗಾಗಿ, ಇತ್ತ ಲಕ್ಷಾಂತರ ರೂ. ನೀಡಲಾಗದೆ, ಅತ್ತ ಕೋತಿಗಳ ಹಾವಳಿಯನ್ನೂ ತಡೆಯಲಾಗದೆ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

**ಕೆಲವೆಡೆ ಮಿತಿ ಮೀರಿದೆ ವಾನರ ಸೇನೆ ಹಾವಳಿ**

**3-4 ಲಕ್ಷ ರೂ.ಗಳಿಗೆ ಡಿಮ್ಯಾಂಡ್:** ''ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದಲ್ಲಿ ಕೋತಿಗಳ ಹಾವಳಿ ಎಲ್ಲೆ ಮೀರಿದೆ. ಈ ಕುರಿತು ಬಿಬಿಎಂಪಿ ಮತ್ತು ಅರಣ್ಯ ಇಲಾಖೆಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಪಾಲಿಕೆಯ ವನ್ಯಜೀವಿ ಪರಿಪಾಲಕನೆಂದು ಪರಿಚಯಿಸಿಕೊಂಡಿರುವ ವ್ಯಕ್ತಿಯು 30 ಮಂಗಗಳನ್ನು ಸೆರೆ ಹಿಡಿದು ಅರಣ್ಯಕ್ಕೆ ಸ್ಥಳಾಂತರಿಸಲು 3-4 ಲಕ್ಷ ರೂ.ಗಳಿಗೆ ಬೇಡಿಕೆ ಇಟ್ಟಿದ್ದಾರೆ. ಇಷ್ಟೊಂದು ದೊಡ್ಡ ಮೊತ್ತ ಭರಿಸಲು ಸಾಧ್ಯವಿಲ್ಲದೆ ಸುಮ್ಮನಾಗಿದ್ದೇವೆ,'' ಎಂದು ಸ್ಥಳೀಯ ನಿವಾಸಿಯೊಬ್ಬರು ತಿಳಿಸಿದರು.

''ಅರಣ್ಯ ಇಲಾಖೆಗೆ ದೂರು ಕೊಟ್ಟು ಕೋತಿಗಳ ಸ್ಥಳಾಂತರಕ್ಕೆ ಅನುಮತಿ ಪಡೆದರೂ, ಅವುಗಳ ಸೆರೆಗೆ ತಗಲುವ ವೆಚ್ಚವನ್ನು ನಿವಾಸಿಗಳೇ ಭರಿಸಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಪ್ರತಿ ಕೋತಿಯ ಸೆರೆಗೆ ಶುಲ್ಕ ನಿಗದಿಪಡಿಸಿಲ್ಲ. ಹೀಗಾಗಿ, ಕೆಲ ವನ್ಯಜೀವಿ ಪರಿಪಾಲಕರು ಮನಸೋಇಚ್ಛೆ ದುಡ್ಡು ಕೇಳುತ್ತಿದ್ದಾರೆ,'' ಎಂದು ಅಳಲು ತೋಡಿಕೊಂಡರು. ''ಇತ್ತೀಚೆಗೆ ಮನೆಯೊಂದಕ್ಕೆ ಲಗ್ಗೆ ಇಟ್ಟಿದ್ದ ವಾನರ ಗುಂಪೊಂದು ನಲ್ಲಿ ತಿರುಗಿಸಿ ಹೋಗಿವೆ. ಈ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ. ಮನೆಯವರು ಕೆಲಸ ಮುಗಿಸಿ ಸಂಜೆ ವಾಪಸ್ಸಾದಾಗ ಮನೆಯ ತುಂಬಾ ನೀರು ತುಂಬಿಕೊಂಡಿತ್ತು. ಕೋತಿಗಳು ನಲ್ಲಿಯ ಬದಲಿಗೆ ಅಡುಗೆ ಅನಿಲ ಸಿಲಿಂಡರ್‌ನ ಟ್ಯಾಪ್ ತಿರುಗಿಸಿ ಹೋಗಿದ್ದರೆ ಏನು ಗತಿ? ಸೋಲಾರ್ ಟ್ಯೂಬ್‌ಗಳ ಮೇಲೆ ಕುಣಿದು ಹಾಳು ಮಾಡುತ್ತಿವೆ. ಪ್ರತಿ ಟ್ಯೂಬ್‌ನ ಬೆಲೆಯು 800 ರೂ. ಇದೆ. ಅಷ್ಟೇ ಅಲ್ಲ, ಮನೆಯೊಳಗೆ ಮಲ, ಮೂತ್ರ ವಿಸರ್ಜನೆ ಮಾಡಿ ಹೋಗುತ್ತಿವೆ,'' ಎಂದು ಹೇಳಿದರು.

## ನಿತ್ಯ ಮೂರ್‍ನಾಲ್ಕು ದೂರು

''ಬಿಬಿಎಂಪಿ ನಿಯಂತ್ರಣ ಕೊಠಡಿಗಳಿಗೆ ಕೋತಿಗಳ ಉಪಟಳದ ಕುರಿತು ನಿತ್ಯ ಮೂರ್‍ನಾಲ್ಕು ದೂರುಗಳು ಬರುತ್ತವೆ. ನಗರದಾದ್ಯಂತ ಮಂಗಗಳ ಉಪಟಳವಿದೆ. ಕೆಲವೊಂದು ವಸತಿ ಪ್ರದೇಶಗಳಲ್ಲಿ ಮಿತಿ ಮೀರಿದೆ. ಕೆಲವರು ಅವುಗಳಿಗೆ ನಿತ್ಯ ಬಗೆ ಬಗೆಯ ಆಹಾರ ಪದಾರ್ಥಗಳನ್ನು ನೀಡುತ್ತಿದ್ದಾರೆ. ಹೀಗಾಗಿ, ಅವು ನೈಸರ್ಗಿಕವಾಗಿ ಆಹಾರ ಹುಡುಕಿ ತಿನ್ನುವುದನ್ನು ಬಿಟ್ಟಿವೆ. ತಿನ್ನುವುದಕ್ಕೆ ಏನೂ ಆಹಾರ ಸಿಗದಿದ್ದಾಗ ಮನೆಗಳ ಮೇಲೆ ದಾಳಿ ಮಾಡುತ್ತಿವೆ,'' ಎಂದು ಬಿಬಿಎಂಪಿ ವನ್ಯಜೀವಿ ಪರಿಪಾಲಕ ಪ್ರಸನ್ನಕುಮಾರ್ ತಿಳಿಸಿದರು.

''ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಪಟ್ಟಿಯಲ್ಲಿ ಕೋತಿಗಳು ಬರುತ್ತವೆ. ಈ ಕಾಯಿದೆ ಅನ್ವಯ ಮಂಗಗಳನ್ನು ಹಿಡಿಯುವುದು, ಹಿಂಸಿಸುವುದು ಶಿಕ್ಷಾರ್ಹ ಅಪರಾಧ. ಇವುಗಳನ್ನು ಹಿಡಿದು ಸ್ಥಳಾಂತರಿಸಲು ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕು. ನಗರ ಪ್ರದೇಶದಲ್ಲಿನ ಕೋತಿಗಳನ್ನು ಏಕಾಏಕಿ ಅರಣ್ಯದೊಳಗೆ ಬಿಟ್ಟರೆ, ಅವು ಊಟ, ನೀರಿಲ್ಲದೆ ಸಾಯುತ್ತವೆ,'' ಎಂದು ವಿವರಿಸಿದರು.





ವಿಕ ವಿಶೇಷ

## ನಿತ್ಯ ಐದಾರು ಸಾವಿರ ರೂ. ಖರ್ಚು

''ಮಂಗಗಳನ್ನು ಹಿಡಿಯುವುದು ಸುಲಭವಲ್ಲ. ಕನಿಷ್ಠ ಒಂದು ತಿಂಗಳ ಕಾಲ ಅವುಗಳ ಚಲನವಲನಗಳ ಮೇಲೆ ಕಣ್ಣಿಡಬೇಕು. ಇದಕ್ಕಾಗಿಯೇ ಕೋತಿಗಳನ್ನು ಹಿಡಿಯುವ ಇಬ್ಬರನ್ನು ನೇಮಿಸಬೇಕು. ಅವರಿಗೆ ಪ್ರತಿದಿನ ಐದಾರು ಸಾವಿರ ರೂ. ನೀಡಬೇಕಾಗುತ್ತದೆ. ಅವುಗಳನ್ನು ಸೆರೆ ಹಿಡಿದು ಅರಣ್ಯದೊಳಗೆ ಬಿಡಲು ಸಾಗಣೆ ವೆಚ್ಚವನ್ನು ದೂರುದಾರರೇ ಭರಿಸಬೇಕು. 30-40 ಕೋತಿಗಳಿರುವ ಗುಂಪನ್ನು ಸೆರೆ ಹಿಡಿಯಲು ಕನಿಷ್ಠ 3-4 ತಿಂಗಳು ಸಮಯ ಬೇಕಾಗುತ್ತದೆ. ಅಷ್ಟೂ ದಿನಕ್ಕೆ ತಗಲುವ ವೆಚ್ಚವನ್ನೂ ನಿವಾಸಿಗಳೇ ಪಾವತಿಸಬೇಕು,'' ಎಂದು ವನ್ಯಜೀವಿ ಪರಿಪಾಲಕರೊಬ್ಬರು ತಿಳಿಸಿದರು.

## ಅರಣ್ಯಾಧಿಕಾರಿಗೆ ದೂರು

ಕನಕಪುರ ರಸ್ತೆಯ ಗೋಕುಲಂ ಅಪಾರ್ಟ್ ಮೆಂಟ್‌ನ ನಿವಾಸಿಗಳು ಮಂಗಗಳ ಉಪಟಳದ ಕುರಿತು ಕಗ್ಗಲೀಪುರ ವಲಯದ ಅರಣ್ಯಾಧಿಕಾರಿಗೆ ದೂರು ನೀಡಿದ್ದರು. ಇವರು ಸ್ಥಳ ಪರಿಶೀಲನೆ ನಡೆಸಿ, ಕೋತಿಗಳನ್ನು ಸ್ಥಳಾಂತರಿಸುವುದು ಅನಿವಾರ್ಯವೆಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ವರದಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಯು ''ಅರಣ್ಯ ಇಲಾಖೆಯಿಂದ ಅನುಮತಿ ಪಡೆದ ನುರಿತ ವ್ಯಕ್ತಿಗಳ ಸೇವೆಯನ್ನು ಉಪಯೋಗಿಸಿಕೊಂಡು ಮಂಗಗಳನ್ನು ಸೆರೆ ಹಿಡಿದು ಕಗ್ಗಲೀಪುರ ವಲಯದ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಬೇಕು. ಅದಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ಅಪಾರ್ಟ್ ಮೆಂಟ್ ನಿವಾಸಿಗಳಿಂದಲೇ ವಸೂಲು ಮಾಡಬೇಕು,'' ಎಂದು ಸೂಚಿಸಿದ್ದಾರೆ.

## ಯಾವ್ಯಾವ ರೀತಿಯ ತೊಂದರೆ?

ಕೋತಿಗಳು ಚೇಷ್ಟೆಗೆ ಹೆಸರಾಗಿವೆ. ಅವುಗಳು ಇದ್ದೆಡೆಯಲ್ಲಿ ರಂಪಾಟ ಮಾಡುವುದು ಸಾಮಾನ್ಯವಾಗಿದೆ. ಕಿಟಕಿ ಸರಳುಗಳ ಕಿರಿದಾದ ಜಾಗದಲ್ಲೇ ಮನೆಗಳೊಳಗೆ ನುಸುಳಿ ರಂಪಾಟ ನಡೆಸುತ್ತಿವೆ. ಮಹಡಿಯಲ್ಲಿ ಒಣಗಲು ಹಾಕುವ ಬಟ್ಟೆಗಳು, ಇನ್ನಿತರೆ ಆಹಾರ ಪದಾರ್ಥಗಳನ್ನು ಕೊಂಡೊಯ್ಯುತ್ತಿವೆ. ಮನೆಗಳೊಳಗೆ ನುಗ್ಗಿ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ ಹೋಗುತ್ತಿವೆ. ತಿಂಡಿ-ತಿನಿಸು, ಹಣ್ಣುಗಳನ್ನು ಕೊಂಡೊಯ್ಯುವವರ ಮೇಲೆ ದಾಳಿ ನಡೆಸಿ ಗಾಯಗೊಳಿಸುತ್ತಿವೆ. ಹೀಗಾಗಿ, ಪೋಷಕರು ಮಕ್ಕಳನ್ನು ಹೊರಬಿಡಲು ಅಂಜುವಂತಾಗಿದೆ. ಮಹಡಿಗಳಲ್ಲಿ ಅಳವಡಿಸಿರುವ ಸೋಲಾರ್ ಮೇಲೆ ಕುಣಿದು ಕುಪ್ಪಳಿಸಿ ಹಾಳುಗೆಡವುತ್ತಿವೆ.

VK
ವಿಜಯ ಕರ್ನಾಟಕ

# ಬಿಬಿಎಂಪಿ ಆಯುಕ್ತರಿಗೆ ಕೋವಿಡ್

**ಬೆಂಗಳೂರು:** ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರಿಗೆ ಕೋವಿಡ್ ಸೋಂಕು ತಗಲಿರುವುದು ದೃಢಪಟ್ಟಿದ್ದು,



ಇತ್ತೀಚೆಗೆ ಅವರ ಸಂಪರ್ಕಕ್ಕೆ ಬಂದವರೆಲ್ಲರೂ ಪರೀಕ್ಷೆ ಮಾಡಿಸಿಕೊಳ್ಳುವಂತೆ ಪಾಲಿಕೆಯು ಸಾರ್ವಜನಿಕರಲ್ಲಿ ಕೋರಿದೆ.

ಆಯುಕ್ತರು ನಿತ್ಯವೂ ಅನೇಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಅವರಿಗೆ ಸೋಮವಾರ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಹಾಗಾಗಿ, ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದರು. ಮಂಗಳವಾರ ವರದಿ ಬಂದಿದ್ದು, ಸೋಂಕು ತಗಲಿರುವುದು ದೃಢಪಟ್ಟಿದೆ. ಸದ್ಯ ಅವರು ಮಲ್ಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜನಾಗ್ರಹ ಸಂಸ್ಥೆಯು ಸೋಮವಾರ ಹಮ್ಮಿಕೊಂಡಿದ್ದ 'ಮೈ ಸಿಟಿ ಮೈ ಬಜೆಟ್' ಕಾರ್ಯಕ್ರಮದಲ್ಲಿ ಆಯುಕ್ತರು ಭಾಗವಹಿಸಿದ್ದರು. ಆ ಬಳಿಕ ಹಲವು ಸಭೆಗಳನ್ನು ನಡೆಸಿದ್ದರು. ಕೋವಿಡ್ ವಾರ್ ರೂಂನಲ್ಲಿ ರಾತ್ರಿ 7.30ರವರೆಗೂ ಇದ್ದರು. ಫಿಟ್ ಇಂಡಿಯಾ ಅಭಿಯಾನದ ಅಂಗವಾಗಿ ಬಿಬಿಎಂಪಿ ಮತ್ತು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯಲ್ಲಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸೈಕ್ಲಥಾನ್ ಕಾರ್ಯಕ್ರಮದಲ್ಲೂ ಪಾಲ್ಗೊಂಡಿದ್ದರು. ಈ ಸೈಕಲ್ ಜಾಥಾದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ, ಸ್ಮಾರ್ಟ್ ಸಿಟಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ಇದೇ ಕಾರ್ಯಕ್ರಮದಲ್ಲಿ ಕೋವಿಡ್ ಯೋಧರನ್ನು ಸನ್ಮಾನಿಸಲಾಗಿತ್ತು. ಭಿಕ್ಷಾಟನೆ ಮಾಡುತ್ತಿರುವ ಮಕ್ಕಳ ಸಮೀಕ್ಷೆ ನಡೆಸುವ ಬಗ್ಗೆ ಶುಕ್ರವಾರ ಸಭೆ ನಡೆಸಿದ್ದರು. ಕಾರ್ಯಕ್ರಮವೊಂದರ ಬಗ್ಗೆ ಚರ್ಚಿಸಲು ಸಿಎಂ ಯಡಿಯೂರಪ್ಪ ಅವರನ್ನೂ ಭಾನುವಾರ ಭೇಟಿ ಮಾಡಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಸೋಂಕು ತಡೆಗೆ ಮಾರುಕಟ್ಟೆಗಳಲ್ಲಿ ಹೊಸ ನಿಯಮ

**ಬೆಂಗಳೂರು:** ಕೋವಿಡ್ ಎರಡನೇ ಅಲೆ ಭೀತಿ ಹಿನ್ನೆಲೆಯಲ್ಲಿ ಮಾರುಕಟ್ಟೆಗಳಲ್ಲಿ ಸೋಂಕು ಹರಡುವಿಕೆ ತಡೆಗೆ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಆರೋಗ್ಯ ಇಲಾಖೆ ಆಯುಕ್ತ ಪಂಕಜ್ ಕುಮಾರ್ ಪಾಂಡೆ ಸುತ್ತೋಲೆ ಹೊರಡಿಸಿದ್ದಾರೆ. ಎಲ್ಲ ಮಳಿಗೆಗಳು ಕಡ್ಡಾಯವಾಗಿ 6 ಅಡಿ ಅಂತರದಲ್ಲಿ ಚೌಕಾಕಾರ ಅಥವಾ ವೃತ್ತಾಕಾರದ ಗುರುತುಗಳನ್ನು ಹಾಕಿ, ಗ್ರಾಹಕರು ಅಂತರ ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದಾರೆ.

» **ಸುತ್ತೋಲೆ ಹೊರಡಿಸಿದ ಆರೋಗ್ಯ ಇಲಾಖೆ**

ಅಂಗಡಿ ಹಾಗೂ ಮಾರುಕಟ್ಟೆಗಳಲ್ಲಿ ಮಾಲೀಕರು ಮತ್ತು ಗ್ರಾಹಕರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಅಂತರ ಕಾಯುಕೊಳ್ಳುವುದು ಸೇರಿ ವಿವಿಧ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಮಳಿಗೆಗಳ ಪ್ರವೇಶ ದ್ವಾರದಲ್ಲಿಯೇ ಸೋಂಕು ನಿವಾರಕ ದಾವಣವನ್ನು ಇಡಬೇಕು. ಮಾಲೀಕರು ದೈನಂದಿನ ಚಟುವಟಿಕೆ ಪ್ರಾರಂಭಿಸುವ ಮುನ್ನ ಶೇ.1 ರ ಪ್ರಮಾಣದಲ್ಲಿ ಸೋಡಿಯಂ ನೈಟ್ರೇಟ್ ದ್ರಾವಣದಿಂದ ಅಥವಾ ಗ್ರಹ ಬಳಕೆಯ ಸೋಪಿನಿಂದ ಮಳಿಗೆಯನ್ನು ಸ್ವಚ್ಛಪಡಿಸಬೇಕು. ಜನ ಪ್ರವೇಶಿಸುವ ಸ್ಥಳವನ್ನು ಆಗಾಗ್ಗೆ ಶೇ.1 ಸೋಡಿಯಂ ಹೈಪೋಕ್ಲೋರೈಡ್ ದ್ರಾವಣದಿಂದ ಶುಚಿಗೊಳಿಸಬೇಕು ಎಂದು ಸೂಚನೆ ನೀಡಿದ್ದಾರೆ.

## ನಿಯಮ ಉಲ್ಲಂಘಿಸಿದರೆ ದಂಡ

**ಮಾಸ್ಕ್ ಖರೀದಿಸಲು ಸಾಧ್ಯವಾಗದವರಿಗೆ ಉಚಿತ ಮಾಸ್ಕ್ ನೀಡುವ ಮೂಲಕ ಮಳಿಗೆ ಮಾಲೀಕರು ನಿಯಮ ಪಾಲನೆಗೆ ಗ್ರಾಹಕರನ್ನು ಉತ್ತೇಜಿಸಬೇಕು. ಮಾರುಕಟ್ಟೆಯ ಪ್ರವೇಶದ್ವಾರ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಸಾಮೂಹಿಕ ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ನಿಯಮ ಉಲ್ಲಂಘಿಸುವ ಅಂಗಡಿ ಮಾಲೀಕರಿಗೆ ದಂಡ ವಿಧಿಸಲಾಗುವುದು. ಹೆಚ್ಚಿನ ದಂಡ ಪ್ರಕರಣಗಳು ವರದಿಯಾದಲ್ಲಿ ಮಾರುಕಟ್ಟೆಯನ್ನು ಮುಚ್ಚಲಾಗುತ್ತದೆ.**

**ಮಾರ್ಷಲ್‌ಗಳ ಬಳಕೆಗೆ ಸೂಚನೆ:** ಸಾರ್ವಜನಿಕ ಸ್ಥಳಗಳಲ್ಲಿ ಜನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಲು ಮಾರ್ಷಲ್‌ಗಳು, ಗೃಹರಕ್ಷಕ ದಳಗಳು ಮತ್ತು ಸ್ವಯಂ ಸೇವಕರ ಸೇವೆಯನ್ನು ಬಳಸಿಕೊಳ್ಳಬೇಕು. ದೈನಂದಿನ ಬಳಕೆಯ ವಸ್ತುಗಳ ಖರೀದಿಗೆ ಆನ್‌ಲೈನ್ ವ್ಯವಸ್ಥೆಯನ್ನು ಉತ್ತೇಜಿಸಬೇಕು. ಸರ್ಕಾರದ ಮಾರ್ಗಸೂಚಿಗಳನ್ನು ಮಾಲೀಕರು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಿದಾರೆ.

Bengaluru Edition
Dec 23, 2020 Page No. 4
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1
ಕನ್ನಡ ದಿನಪತ್ರಿಕೆ

# ಬಿಬಿಎಂಪಿ ಆಯುಕ್ತರಿಗೆ ಕರೊನಾ ಪಾಸಿಟೀವ್

**ಬೆಂಗಳೂರು:** ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರಿಗೆ ಮಂಗಳವಾರ ಕರೊನಾ ಸೋಂಕು ದೃಢಪಟ್ಟಿದ್ದು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

» **ನಗರದ ಖಾಸಗಿ ಆಸ್ಪತ್ರೆಗೆ ದಾಖಲು**

ಸೋಂಕಿನ ಲಕ್ಷಣಗಳಾದ ತೀವ್ರ ಜ್ವರ, ಕೆಮ್ಮು, ಶೀತ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮಾಡಿಸಿದಾಗ ಸೋಂಕು ದೃಢಪಟ್ಟಿದೆ. ನಂತರ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿಯೂ ಸೋಂಕು ದೃಢಪಟ್ಟಿದ್ದರಿಂದ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ ಪಡೆಯಲು ಮಲ್ಲಿಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ತಮ್ಮೊಂದಿಗೆ ಸಭೆ, ಸಮಾರಂಭದಲ್ಲಿ ಪಾಲ್ಗೊಂಡ ಅಧಿಕಾರಿ, ಸಿಬ್ಬಂದಿಯನ್ನು ಕ್ವಾರಂಟೈನ್‌ಗೆ ಒಳಗಾಗುವಂತೆ ಸೂಚಿಸಿದ್ದಾರೆ. ಲಕ್ಷಣ ಕಂಡುಬಂದರೆ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಲು ಆಯುಕ್ತರು ಮನವಿ ಮಾಡಿದ್ದಾರೆ.

Bengaluru Edition
Dec 23, 2020 Page No. 4
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1

## ಬಿಬಿಎಂಪಿ ಚುನಾವಣೆ ಮುಂದಕ್ಕೆ ಹಾಕಲು ಅಸ್ತ್ರ | 243 ವಾರ್ಡ್‌ಗಳ ಪಾಲಿಕೆ

# ಮುಂದೂಡಿಕೆಗೆ ಕಾಯ್ದೆ ಬಲ

**ಬೆಂಗಳೂರು:** ಬಿಬಿಎಂಪಿ ಹೊಸ ಕಾಯ್ದೆಗೆ ರಾಜ್ಯಪಾಲರು ಅಂಗೀಕಾರ ಮಾಡಿದ್ದು, ಸರ್ಕಾರ ಕಾಯ್ದೆ ಜಾರಿಗೊಳಿಸಿದೆ. 198 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕೆಂಬ ಹೈಕೋರ್ಟ್ ತೀರ್ಪಿನ ವಿರುದ್ಧ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಚುನಾವಣೆ ಮುಂದೂಡಲು ಸರ್ಕಾರಕ್ಕೆ ಬಿಬಿಎಂಪಿ ವಿಧೇಯಕ-2020 ಕಾಯ್ದೆಯು ಮತ್ತಷ್ಟು ಬಲ ತಂದಿದೆ.

» **ಸಮಿತಿಗಳ ಮೂಲಕ ಅಧಿಕಾರ ವಿಕೇಂದ್ರೀಕರಣ**

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಬಿಬಿಎಂಪಿ ವಿಧೇಯಕಕ್ಕೆ ಅಂಗೀಕಾರ ಪಡೆಯಲಾಗಿತ್ತು. ಪಾಲಿಕೆ ವ್ಯಾಪ್ತಿ ಹಿಗ್ಗಿಸುವ ಮತ್ತು ಆಡಳಿತ ಯಂತ್ರದಲ್ಲಿ ಬದಲಾವಣೆ ತರುವ ಬಿಬಿಎಂಪಿ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಅಧಿಸೂಚನೆ ಮೂಲಕ ಕಾಯ್ದೆ ಜಾರಿಯಾಗಿರುವುದು ಸುಪ್ರೀಂ ಕೋರ್ಟ್‌ನಲ್ಲಿ ಚುನಾವಣೆ ಮುಂದೂಡಿಕೆಗೆ ಕಾರಣಗಳನ್ನು ನೀಡಲು ಪ್ರಬಲ ಅಸ್ತ್ರ ಸಿಕ್ಕಂತಾಗಿದೆ. ಜತೆಗೆ, ಬಿಬಿಎಂಪಿ ಚುನಾವಣೆ ನಡೆಸುವ ಸಂಬಂಧ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದು, ವಾರ್ಡ್‌ಗಳನ್ನು 243ಗೆ ಹೆಚ್ಚಿಸಿ ಮರವಿಂಗಡಣೆ ಪ್ರಕ್ರಿಯೆ ಪ್ರಾರಂಭಿಸಲು ಅವಕಾಶ ಸಿಕ್ಕಂತಾಗಿದೆ.

## ಸಹಿ ಹಾಕಿದ್ದಕ್ಕೆ ಆಮ್ ಆದ್ಮಿ ಪಕ್ಷ ಟೀಕೆ

ಬೆಂಗಳೂರು: ರಾಜ್ಯಪಾಲರು ಬಿಬಿಎಂಪಿಯ ಅವೈಜ್ಞಾನಿಕ ಕಾಯ್ದೆಗೆ ಸಹಿ ಹಾಕುವ ಮೂಲಕ ಬೆಂಗಳೂರಿನ ಕರಾಳ ಭವಿಷ್ಯಕ್ಕೆ ಮುನ್ನುಡಿ ಬರೆದಿದ್ದಾರೆ ಎಂದು ಆಮ್ ಆದ್ಮಿ ಪಕ್ಷ ದೂರಿದೆ. ಈ ಕಾಯ್ದೆಯಿಂದ ಇನ್ನು ಮುಂದೆ ಪಾಲಿಕೆ ಸದಸ್ಯರಿಗೆ ಯಾವ ಅಧಿಕಾರವೂ ಇರುವುದಿಲ್ಲ ಎಂದು ಪಕ್ಷದ ರಾಜ್ಯ ಸಂಚಾಲಕಿ ಶಾಂತಲಾ ದಾಮ್ಲೆ ಹೇಳಿದ್ದಾರೆ. ಅಧಿಕಾರ ವಿಕೇಂದ್ರಿಕರಣ ತತ್ವವನ್ನೇ ಗಾಳಿಗೆ ತೂರಿ ಸಂಪೂರ್ಣ ಅಧಿಕಾರವನ್ನು ಸರ್ಕಾರ ತನ್ನ ತೆಕ್ಕೆಗೆ ತೆಗೆದುಕೊಂಡು ಪಾಲಿಕೆ ಸದಸ್ಯರನ್ನು ಆಟದ ಗೊಂಬೆಗಳನ್ನಾಗಿ ಇಟ್ಟುಕೊಳ್ಳುವ ತಿದ್ದುಪಡಿ ಇದಾಗಿದೆ ಎಂದು ವಕ್ತಾರ ಶರತ್ ಖಾದ್ರಿ ಹೇಳಿದ್ದಾರೆ.




## ಬಿಬಿಎಂಪಿ ಕಾಯ್ದೆ-2020ರ ಪ್ರಮುಖ ಅಂಶಗಳು

- ಬಿಬಿಎಂಪಿ ಮೇಯರ್ ಮತ್ತು ಉಪ ಮೇಯರ್ ಅಧಿಕಾರಾವಧಿ 1 ವರ್ಷದಿಂದ 2.5 ವರ್ಷಕ್ಕೆ ಹೆಚ್ಚಳ.
- ಬಿಬಿಎಂಪಿ ಸುತ್ತಲಿನ 1 ಕಿ.ಮೀ. ವ್ಯಾಪ್ತಿಯ ಗ್ರಾಮ, ಗ್ರಾಪಂ, ಪಟ್ಟಣ ಪಂಚಾಯಿತಿ ಹಾಗೂ ನಗರಸಭೆಗೆ ಸೇರಿದ ಪ್ರದೇಶಗಳು ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಲಿವೆ.
- ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಳ.
- ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಸಮನಾದ ಅಧಿಕಾರಿಯನ್ನು ಮುಖ್ಯ ಆಯುಕ್ತರನ್ನಾಗಿ ನೇಮಿಸಲಾಗುತ್ತದೆ.
- ಸಾರ್ವಜನಿಕರಿಗೆ ತುರ್ತಾಗಿ ಸ್ಪಂದಿಸಲು ವಿಪತ್ತು ನಿರ್ವಹಣಾ ಸಮಿತಿ ರಚನೆ.
- ಪಾಲಿಕೆ ಅಧಿಕಾರ ವಿಕೇಂದ್ರಿಕರಣ ಉದ್ದೇಶದಿಂದ ವಿಧಾನಸಭಾ ಕ್ಷೇತ್ರ ಹಾಗೂ ವಾರ್ಡ್‌ಗಳಲ್ಲಿ ಏರಿಯಾ ಸಭಾಗಳು ರಚನೆಯಾಗಲಿವೆ. ಈ ಏರಿಯಾ ಸಭಾಗಳಲ್ಲಿ ಪ್ರತಿಯೊಬ್ಬ ಮತದಾರ ಸದಸ್ಯನಾಗಿರುತ್ತಾರೆ.
- ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕ್ಷೇತ್ರ ಸಮಾಲೋಚನಾ ಸಮಿತಿ ರಚನೆ ಆಗಲಿದ್ದು, ವಾರ್ಡ್ ಸದಸ್ಯರು ಸದಸ್ಯರಾಗಿರುತ್ತಾರೆ. ಸಮಿತಿ ಅಧಿಕಾರಾವಧಿ 30 ತಿಂಗಳು ಇರಲಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಮಾಜಿ ಕಾರ್ಪೊರೇಟರ್ ವಿರುದ್ಧ ಕೇಸ್

» ಮಹಿಳೆಗೆ ನಿಂದನೆ, ಪ್ರಾಣ ಬೆದರಿಕೆ ಆರೋಪ

» ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ

**ಬೆಂಗಳೂರು:** ಮಹಿಳೆಯನ್ನು ನಿಂದಿಸಿ ಪ್ರಾಣ ಬೆದರಿಕೆ ಒಡ್ಡಿದ ಆರೋಪದ ಮೇಲೆ ಮಾಜಿ ಕಾರ್ಪೊರೇಟರ್ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಾಲ್‌ಬಾಗ್ ರಸ್ತೆಯ ನಿವಾಸಿ ಪೂಜಾ ಅಗರ್ವಾಲ್ ಎಂಬುವರು ಕೊಟ್ಟ ದೂರಿನ ಮೇರೆಗೆ ಧರ್ಮರಾಯ ದೇವಸ್ಥಾನ ವಾರ್ಡ್ ಮಾಜಿ ಕಾರ್ಪೊರೇಟರ್ ಧನರಾಜ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಮಧ್ಯಾಹ್ನ 2 ಗಂಟೆಗೆ ಲಾಲ್‌ಬಾಗ್ ರಸ್ತೆಯಲ್ಲಿರುವ ಕೋಲ್ಕತ ಟ್ಯೂಬ್ ಸೆಂಟರ್ ಅಂಗಡಿಗೆ ಧನರಾಜ್ ತೆರಳಿ ಪೈಪ್ ಬೆಲೆ ಕೇಳಿದ್ದಾರೆ. ಅಂಗಡಿ ಮಾಲೀಕ ಸಾವರ್‌ಮಲ್ ಅಗರ್ವಾಲ್ ಚೀಟಿಯಲ್ಲಿ ಪೈಪ್ ದರ ಬರೆದುಕೊಟ್ಟಿದ್ದಾರೆ. ಇತರೆ ಅಂಗಡಿಗಿಂತ ನಿಮ್ಮಲ್ಲಿ ಹೆಚ್ಚಿನ ಬೆಲೆ ಇದೆ ಧನರಾಜ್ ಪ್ರಶ್ನಿಸಿದ್ದಾರೆ. ಈ ವೇಳೆ ಸಾವರ್‌ಮಲ್ ಅವರ ಸೊಸೆ ಪೂಜಾ ಅಗರ್ವಾಲ್ ಮಧ್ಯಪ್ರವೇಶ ಮಾಡಿದಾಗ ಮಾತಿಗೆ ಮಾತು ಬೆಳೆದಿದೆ. ಈ ವೇಳೆ ಧನರಾಜ್ ಆಕೆಯನ್ನು ಅವಾಚ್ಯವಾಗಿ ನಿಂದಿಸಿ, ಪ್ರಾಣ ಬೆದರಿಕೆ ಹಾಕಿದ್ದಾರೆ. ಈ ಬಗ್ಗೆ ಪೂಜಾ ದೂರು ನೀಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಧನರಾಜ್, ಪೈಪ್ ಖರೀದಿಸಲು ಅಂಗಡಿಗೆ ಹೋದಾಗ ಬೆಲೆ ಹೆಚ್ಚು ಎಂದು ಪ್ರಶ್ನೆ ಮಾಡಿದೆ. ಅಷ್ಟಕ್ಕೆ ಅಂಗಡಿ ಮಾಲೀಕ ನಾನು ಕೊಟ್ಟ ಚೀಟಿಯನ್ನು ಎಸೆದರು. ಅದನ್ನು ಕೇಳಿದ್ದಕ್ಕೆ ಒಳಗಿನಿಂದ ಬಂದ ಅವರ ಸೊಸೆ ಏಕಾಏಕಿ ಜೋರಾಗಿ ಮಾತನಾಡಿ ಅವಾಚ್ಯ ಶಬ್ದದಿಂದ ನಿಂದಿಸಿದರು. ಇದೀಗ ನನ್ನ ವಿರುದ್ಧವೇ ದೂರು ನೀಡಿದ್ದಾರೆ. ನಾನು ಕೂಡ ದೂರು ನೀಡುತ್ತೇನೆ. ಅಂಗಡಿಯ ಸಿಸಿ ಕ್ಯಾಮರಾ ಪರಿಶೀಲನೆ ನಡೆಸಲಿ. ಗಲಾಟೆ ಮಾಡಿದ್ದು, ಯಾರು ಎಂಬ ಸತ್ಯ ತಿಳಿಯಲಿದೆ ಎಂದು ಧನರಾಜ್ ಹೇಳಿದ್ದಾರೆ.

ವಿಶ್ವವಾಣಿ

ವಿಶ್ವವಾಣಿ

# ಕರೋನಾ 2.0; ರಾತ್ರಿ ಕರ್ಫ್ಯೂಗೆ ಚಿಂತನೆ

## ಶಾಲಾ-ಕಾಲೇಜು ಆರಂಭದ ಬಗ್ಗೆ ಮತ್ತೊಮ್ಮೆ ಚರ್ಚೆ

## ಸಿಎಸ್ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಸಭೆ ಇಂದು

## ಇಂಗ್ಲೆಂಡ್‌ನಿಂದ ರಾಜ್ಯಕ್ಕೆ 2,127 ಮಂದಿ ಆಗಮನ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ವಿಶ್ವದ ಹಲವು ರಾಷ್ಟ್ರಗಳಲ್ಲಿ ಕರೋನಾದ ರೂಪಾಂತರ ವೈರಾಣು ಕಾಲಿಟ್ಟಿರುವ ಬೆನ್ನಲ್ಲೇ ರಾಜ್ಯದಲ್ಲಿ ನೈಟ್ ಕರ್ಫ್ಯೂ ಹೇರುವ ಚರ್ಚೆ ದಟ್ಟವಾಗಿದೆ.

ಇಂಗ್ಲೆಂಡ್‌ನಲ್ಲಿ ಕಾಣಿಸಿಕೊಂಡಿರುವ ವೈರಾಣು ರಾಜ್ಯದಲ್ಲಿ ಹಬ್ಬದಂತೆ ತಡೆಯಲು ಈಗಾಗಲೇ ಇಂಗ್ಲೆಂಡ್‌ನಿಂದ ಬರುವ ವಿಮಾನಗಳಿಗೆ ನಿರ್ಬಂಧ ಹೇರಲಾಗಿದೆ. ದೇಶದ ಒಳಗಡೆ ಆಗಮಿಸಿರುವವರಿಗೆ ಕಡ್ಡಾಯವಾಗಿ ಕರೋನಾ ಪರೀಕ್ಷೆ ಮಾಡಿಸಲಾಗುತ್ತಿದೆ. ಆದರೂ ಸೋಂಕು ನಿಯಂತ್ರಿಸಲು ಸಾಧ್ಯವಾಗದಿದ್ದರೆ, ರಾತ್ರಿ ಕರ್ಫ್ಯೂ ಹೇರುವ ಸಾಧ್ಯತೆ ಇದೆ.

ಈ ಬಗ್ಗೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮಾತನಾಡಿ, 'ಈಗಾಗಲೇ ಹಲವು ರಾಜ್ಯಗಳು ಡಿ.25ರಿಂದ ಜ.5ರವರೆಗೆ ರಾತ್ರಿ ಕರ್ಫ್ಯೂ ಹೇರಿವೆ. ಇದೇ ಮಾದರಿಯಲ್ಲಿ ರಾಜ್ಯದಲ್ಲೂ ಹೇರಿಕೆ ಮಾಡಬೇಕೇ ಎಂಬ ಬಗ್ಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಭಿಪ್ರಾಯ ಪಡೆದು ಬಳಿಕ ತೀರ್ಮಾನಿಸಲಾಗುವುದು' ಎಂದು ಸ್ಪಷ್ಟಪಡಿಸಿದ್ದಾರೆ.

'ರಾಜ್ಯದಲ್ಲಿಯೂ ಮತ್ತೆ ಲಾಕ್‌ಡೌನ್ ಮಾಡುವ ಬಗ್ಗೆ ಸರಕಾರದ ಚಿಂತನೆ ಇಲ್ಲ. ಕರೋನಾ ನೆಗೆಟಿವ್ ವರದಿ ಇಲ್ಲದೆ ಹೊರ ದೇಶಗಳಿಂದ ರಾಜ್ಯಕ್ಕೆ ಆಗಮಿಸಿರುವ 2,127 ಮಂದಿಯನ್ನು ಪತ್ತೆ ಹಚ್ಚಿ, ಕ್ವಾರಂಟೈನ್ ಮಾಡಲಾಗಿದೆ' ಎಂದು ಹೇಳಿದ್ದಾರೆ.

### ರಾತ್ರಿ ಕರ್ಫ್ಯೂ ಇಲ್ಲ

ಕರೋನಾದ ರೂಪಾಂತರ ವೈರಸ್‌ನ್ನು ಹಿಮ್ಮೆಟ್ಟಿಸಲು ರಾತ್ರಿ ಕರ್ಫ್ಯೂ ಅಗತ್ಯ ಎನ್ನುವ



ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರು, 'ದೇಶಾದ್ಯಂತ ಈಗಾಗಲೇ ಅಲರ್ಟ್ ಇದೆ. ಪ್ರಧಾನಿ ಕೂಡ ಆತಂಕಕ್ಕೊಳಗಾಗದೆ ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿಕೊಂಡಿದ್ದಾರೆ. ಈಗಾಗಲೇ ಮಹಾರಾಷ್ಟ್ರದಲ್ಲಿ ನೈಟ್ ಕರ್ಫ್ಯೂ ಜಾರಿ ಮಾಡಲಾಗಿದೆ. ಆದರೆ ಆ ಮಾದರಿಯ ಕರ್ಫ್ಯೂ ರಾಜ್ಯದಲ್ಲಿ ಸದ್ಯಕ್ಕೆ ಅಗತ್ಯವಿಲ್ಲ' ಎಂದು ಸ್ಪಷ್ಟಪಡಿಸಿದರು.

### ಬಿಬಿಎಂಪಿ ಆಯುಕ್ತರಿಗೆ ಕರೋನಾ ಸೋಂಕು

ಬೆಂಗಳೂರಿನಲ್ಲಿ ಕರೋನಾ ನಿಯಂತ್ರಣಕ್ಕೆ



ಬರುತ್ತಿರುವ ಹೊಸ್ತಿಲಲ್ಲಿಯೇ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಅವರಿಗೆ ಕರೋನಾ ಸೋಂಕು ಕಾಣಿಸಿಕೊಂಡಿದೆ. ಮಂಗಳವಾರ ಕರೋನಾ ಸೋಂಕು ಕಾಣಿಸಿಕೊಂಡಿದ್ದು, ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ.

- ಕೋವಿಡ್ ತಾಂತ್ರಿಕ ಸಲಹಾ ಸಮಿತಿಯೊಂದಿಗೆ ಚರ್ಚಿಸಿ ನೈಟ್ ಕರ್ಫ್ಯೂ ಬಗ್ಗೆ ನಿರ್ಧಾರ
- ಬ್ರಿಟನ್‌ನಿಂದ ಬಂದಿದ್ದ ತಾಯಿ, ಮಗಳ ಗಂಟಲು ದ್ರವ ಪ್ರಯೋಗಾಲಯಕ್ಕೆ ರವಾನೆ

**ತಾಯಿ, ಮಗಳ ಮೂಲಕ ಬೆಂಗಳೂರಿಗೆ ಬಂದ ಹೊಸ ವೈರಸ್:** ಹೊಸ ತಳಿಯ ಕರೋನಾ ವೈರಸ್ ಬೆಂಗಳೂರಿನಲ್ಲಿ ಪತ್ತೆಯಾಗಿದೆ. ಬ್ರಿಟನ್‌ನಿಂದ ಬೆಂಗಳೂರಿಗೆ ಬಂದಿಳಿದಿದ್ದ ತಾಯಿ, ಮಗಳಿಗೆ ಕರೋನಾ ವರದಿ ದೃಢಪಟ್ಟಿದೆ. ಇದು ಯಾವ ಸ್ವರೂಪದ ಕರೋನಾ ವೈರಸ್ ಎಂಬುದನ್ನು ಪತ್ತೆ ಮಾಡಲು ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಸ್ವಾಬ್ ಮಾದರಿಯನ್ನು ರವಾನೆ ಮಾಡಲಾಗಿದೆ.

ಡಿಸೆಂಬರ್ 19ರಂದು ಯುಕೆಯಿಂದ ಸಿಲಿಕಾನ್ ಸಿಟಿಗೆ ಬಂದಿಳಿದಿದ್ದರು. ಬಳಿಕ ಖಾಸಗಿ ಲ್ಯಾಬ್‌ನಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾಗಿದ್ದರು. ಈ ವರದಿ ಬಂದಿದ್ದು, ಇವರಲ್ಲಿ ಕರೋನಾ ದೃಢಪಟ್ಟಿದೆ. ಈ ಹಿನ್ನೆಲೆ ಬಿಬಿಎಂಪಿ ಆರೋಗ್ಯಾಧಿಕಾರಿಗಳ ತಂಡ ಮಂಗಳವಾರ ಭೇಟಿ ನೀಡಿ ಹೊಸ ವೈರಸ್ ತಳಿ ಪತ್ತೆ ಮಾಡಲು ಅವರ ಸ್ವಾಬ್ ಸಂಗ್ರಹ ಮಾಡಿದ್ದು, ಅದನ್ನು ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ವಿಶ್ವವಾಣಿ

**ಬಿಬಿಎಂಪಿ ಕಾಯಿದೆಗೆ ರಾಜ್ಯಪಾಲರ ಅಂಕಿತ | ಚುನಾವಣೆ ಮುಂದೂಡಲು ಸರಕಾರಕ್ಕೆ ಸಲೀಸು | ನೂತನ ಕಾಯಿದೆಯಿಂದ ಮೇಯರ್ ಅವಧಿ 2.5 ವರ್ಷಕ್ಕೆ ಏರಿಕೆ**

# 243 ವಾರ್ಡ್ ರಚಿಸಲು ರಾಜ್ಯಪಾಲರ ಒಪ್ಪಿಗೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಚಳಿಗಾಲದ ಅಧಿವೇಶನದಲ್ಲಿ ಅನುಮೋದನೆಯಾಗಿದ್ದ ಬಿಬಿಎಂಪಿ ಕಾಯಿದೆಗೆ (ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198 ರಿಂದ 243ಕ್ಕೆ ಏರಿಕೆ) ರಾಜ್ಯಪಾಲ ವಾಜುಭಾಯಿ ವಾಲಾ ಅವರು ಅಂಕಿತ ಹಾಕಿದ್ದು, ಈ ಮೂಲಕ ಬಿಬಿಎಂಪಿ ಚುನಾವಣೆ ಮುಂದೂಡುವ ವಿಷಯಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸಲು ಸರಕಾರಕ್ಕೆ ಮತ್ತೊಂದು ಬ್ರಹ್ಮಾಸ್ತ್ರ ಸಿಕ್ಕಿದೆ.

ವಿಧಾನಮಂಡಲದಲ್ಲಿ ಅಂಗೀಕಾರಗೊಂಡಿದ್ದ ಬಿಬಿಎಂಪಿ ಕಾಯಿದೆಗೆ ಮಂಗಳವಾರ ರಾಜ್ಯಪಾಲರ ಅಂಕಿತ ಬಿದ್ದಿದೆ. ಬಿಬಿಎಂಪಿ ಕಾಯಿದೆಯ ಅಧಿಸೂಚನೆಯನ್ನು ರಾಜ್ಯ ಸರಕಾರ ಹೊರಡಿಸಿರುವುದರಿಂದ, ಬಿಬಿಎಂಪಿ ಚುನಾವಣೆಯನ್ನು ಮುಂದೂಡುವ ಹಾದಿಯನ್ನೂ ಸುಗಮಗೊಳಿಸಿದೆ.

**ರಾಜ್ಯಪಾಲರಿಂದ ಅಂಕಿತ:** ಬಿಬಿಎಂಪಿ ವ್ಯಾಪ್ತಿಯನ್ನು ಹಿಗ್ಗಿಸುವ ಮತ್ತು ಆಡಳಿತ ಯಂತ್ರದಲ್ಲಿ ಬದಲಾವಣೆ ತರುವ ಬಿಬಿಎಂಪಿ ಕಾಯಿದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಈ ಸಂಬಂಧ ಸರಕಾರ ಅಧಿಸೂಚನೆಯನ್ನು ಹೊರಡಿಸಿದೆ. ವಿಧಾನಮಂಡಲ ಅಧಿವೇಶನದಲ್ಲಿ ಬಿಬಿಎಂಪಿ ವಿಧೇಯಕಕ್ಕೆ ಅಂಗೀಕಾರ ಪಡೆಯಲಾಗಿತ್ತು. ಇದೀಗ ವಿಧಾನಮಂಡಲದಲ್ಲಿ ಅಂಗೀಕಾರ ಪಡೆದ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕುವ ಮೂಲಕ ಬಿಬಿಎಂಪಿ ಕಾಯಿದೆ ಜಾರಿಯಾಗಿದೆ.

ಅಧಿಸೂಚನೆ ಮೂಲಕ ಕಾಯಿದೆ ಜಾರಿಯಾದ ಹಿನ್ನೆಲೆ ಮತ್ತು ಬಿಬಿಎಂಪಿ ಚುನಾವಣೆ ನಡೆಸುವ ಸಂಬಂಧ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಸರಕಾರ ಬಿಬಿಎಂಪಿ ವಾರ್ಡ್‌ಗಳನ್ನು 243ಗೆ ಹೆಚ್ಚಿಸುವ ಮರುವಿಂಗಡನೆ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ.



**ನೂತನ ಕಾಯಿದೆಯ ಪ್ರಮುಖಾಂಶ**

- ಬಿಬಿಎಂಪಿ ವಾರ್ಡ್‌ಗಳನ್ನು ಮರುವಿಂಗಡಿಸಿ 198ರಿಂದ 243ಗೆ ಹೆಚ್ಚಿಸುವುದು.
- ಮೇಯರ್ ಮತ್ತು ಉಪಮೇಯರ್ ಅಧಿಕಾರಾವಧಿ ಒಂದು ವರ್ಷದಿಂದ ಎರಡೂವರೆ ವರ್ಷಕ್ಕೆ ಹೆಚ್ಚಳ
- ಮುಖ್ಯ ಕಾರ್ಯದರ್ಶಿ ಸಮನಾಂತರ ಅಧಿಕಾರಿಯನ್ನು ಬಿಬಿಎಂಪಿ ಆಯುಕ್ತರ ಹುದ್ದೆಗೆ ನೇಮಕ
- ಆಯುಕ್ತರ ವರ್ಗಾವಣೆಗೆ ಮೊದಲು ಬಿಬಿಎಂಪಿ ಮೇಯರ್‌ಗೆ ಮಾಹಿತಿ
- ಶಾಸಕರ ಅಧ್ಯಕ್ಷತೆಯಲ್ಲಿ ವಿಧಾನಸಭಾ ಕ್ಷೇತ್ರವಾರು ಹಾಗೂ ವಾರ್ಡ್‌ನಲ್ಲಿ ಪ್ರಾಂತ್ಯ ಸಭೆ ಅಥವಾ ಏರಿಯಾ ಸಭಾ ರಚನೆ

**ಮೇಯರ್ ಅಧಿಕಾರ ವಿಸ್ತರಣೆ:** ಈ ನೂತನ ಬಿಬಿಎಂಪಿ ಕಾಯಿದೆ ಪ್ರಕಾರ ಬಿಬಿಎಂಪಿಯ ವ್ಯಾಪ್ತಿ ಮತ್ತಷ್ಟು ಹಿಗ್ಗಲಿದೆ. ಮೇಯರ್ ಮತ್ತು ಉಪಮೇಯರ್ ಅಧಿಕಾರಾವಧಿ ಒಂದು ವರ್ಷದಿಂದ ಎರಡೂವರೆ ವರ್ಷಕ್ಕೆ ಹೆಚ್ಚಾಗಲಿದೆ. ನೂತನ ಕಾಯಿದೆ ಪ್ರಕಾರ ಬಿಬಿಎಂಪಿ ಸುತ್ತಲೂ ಇರುವ ಒಂದು ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮ, ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ನಗರಸಭೆಗೆ ಸೇರಿದ ಪ್ರದೇಶಗಳು ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಲಿವೆ. ಆ ಮೂಲಕ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198 ರಿಂದ 243ಕ್ಕೆ ಏರಿಕೆಯಾಗಲಿದೆ.

ಬಿಬಿಎಂಪಿಗೆ ಪ್ರಸ್ತುತ ಇರುವ ಬಿಬಿಎಂಪಿ ಆಯುಕ್ತರ ಹುದ್ದೆಯನ್ನು ಮುಖ್ಯ ಆಯುಕ್ತ ಹುದ್ದೆಯಾಗಿ ಮಾಡಲಾಗುತ್ತದೆ. ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದವರನ್ನು ಮುಖ್ಯ ಆಯುಕ್ತರ ಹುದ್ದೆಗೆ ನೇಮಕ ಮಾಡಲಾಗುವುದು. ಮುಖ್ಯ ಆಯುಕ್ತರ ಅಧಿಕಾರಾವಧಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿಯೋಜನೆ ಮಾಡಬೇಕು.

**ವಿಪತ್ತು ನಿರ್ವಹಣಾ ಸಮಿತಿ ರಚನೆ:** ಅವಧಿಗೆ ಮೊದಲು ವರ್ಗಾವಣೆ ಮಾಡಬೇಕಾದರೆ ಬಿಬಿಎಂಪಿ ಮೇಯರ್ ಅವರಿಗೆ ಕಾರಣಗಳನ್ನು ತಿಳಿಸಬೇಕಾಗಿದೆ. ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ. ನಗರದಲ್ಲಿ ಸಾರ್ವಜನಿಕರಿಗೆ ತುರ್ತಾಗಿ ಸ್ಪಂದಿಸುವ ಉದ್ದೇಶದಿಂದ ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವ ಉದ್ದೇಶದಿಂದ ವಿಧಾನಸಭಾ ಕ್ಷೇತ್ರವಾರು ಹಾಗೂ ವಾರ್ಡ್‌ನಲ್ಲಿ ಪ್ರಾಂತ್ಯ ಸಭೆ ಅಥವಾ ಏರಿಯಾ ಸಭಾಗಳು ರಚನೆಯಾಗಲಿವೆ. ಏರಿಯಾ ಸಭಾಗಳಲ್ಲಿ ವಾರ್ಡಿನ ಪ್ರತಿಯೊಬ್ಬ ಮತದಾರನೂ ಸದಸ್ಯರಾಗಿರಲಿದ್ದಾರೆ.

ಈ ಸಮಿತಿಗಳು ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾಗಲಿದೆ. ಇದರಿಂದ ಶಾಸಕರಿಗೆ ಬಿಬಿಎಂಪಿ ಆಡಳಿತದಲ್ಲಿ ಹೆಚ್ಚಿನ ಪ್ರಾತಿನಿತ್ಯ ಸಿಗಲಿದೆ. ಕ್ಷೇತ್ರ ಸಮಾಲೋಚನಾ ಸಮಿತಿಗಳ ರಚನೆ ಮಾಡಲಾಗುವುದು. ಪಾಲಿಕೆ ವ್ಯಾಪ್ತಿಯ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದು ವಿಧಾನಸಭಾ ಸಮಾಲೋಚನಾ ಸಮಿತಿಯನ್ನು ರಚನೆ ಮಾಡಲಾಗುವುದು. ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ವಲಯಕ್ಕೂ ಒಂದು ಸಮಿತಿಯನ್ನು ರಚನೆ ಮಾಡಲಾಗುವುದು. ಪಾಲಿಕೆಯನ್ನು 15 ವಲಯಗಳನ್ನಾಗಿ ಮರುವಿಂಗಡನೆ ಮಾಡಲಾಗುವುದು. ಪ್ರತಿ ವಲಯಗಳಿಗೂ ಸಮಿತಿ ರಚನೆಯಾಗಲಿದೆ.

ವಿಶ್ವವಾಣಿ

# ಅಪಾರ್ಟ್‌ಮೆಂಟ್‌ನಲ್ಲಿ ವರ್ಷಾಚರಣೆ ಬಂದ್

**ಬೆಂಗಳೂರು:** ಹೊಸ ವರ್ಷಾಚರಣೆ ಸಂದರ್ಭದಲ್ಲಿ ಅಪಾರ್ಟ್‌ಮೆಂಟ್ ಲಾಬಿ ಹೊರಭಾಗದಲ್ಲಿ ಜನ ಸೇರಿ ಸಂಭ್ರಮಾಚರಣೆ ಮಾಡುವುದಕ್ಕೆ ಬಿಬಿಎಂಪಿ ನಿಷೇಧ ಹೇರಿದೆ. ಕರೋನಾದಿಂದಾಗಿ ರಾಜ್ಯ ಸರಕಾರದ ಆದೇಶದಂತೆ ಕರೋನಾ ನಿಯಮ ಎಲ್ಲಾ ಕಡೆ ಅನ್ವಯವಾಗಲಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಆಚರಣೆಯನ್ನು ನಿಷೇಧಿಸಲಾಗಿದೆ. ಅಪಾರ್ಟ್‌ಮೆಂಟ್‌ನಲ್ಲಿ ವಾಸವಿರುವ ಜನರು ಒಂದೇ ಕಡೆ ಸೇರಿ ಆಚರಣೆ ಮಾಡುವಂತಿಲ್ಲ. ಒಂದು ವೇಳೆ ಗುಂಪು ಗುಂಪಾಗಿ ಸಾರ್ವಜನಿಕ ಸ್ಥಳಗಳಲ್ಲಿ ಆಚರಣೆ ಮಾಡಿರುವುದು ಕಂಡು ಬಂದಲ್ಲಿ ಕ್ರಮ ಜರುಗಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಹೇಳಿದ್ದಾರೆ.

ಬಿಬಿಎಂಪಿಯ ಈ ನಿರ್ಧಾರವನ್ನು ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸ್ವಾಗತಿಸಿದ್ದು, ಕರೋನಾ ಹಬ್ಬುತ್ತಿರುವ ಸಂದರ್ಭದಲ್ಲಿ ಹೊಸ ವರ್ಷಾಚರಣೆ ಹೆಚ್ಚಲ್ಲ. ಈ ಬಾರಿ ಮನೆಗಳಲ್ಲೇ ಸರಳ ಆಚರಣೆಗೆ ಸೂಚಿಸಲಾಗಿದೆ.ಪಬ್,ರೆಸ್ಟೋರೆಂಟ್‌ಗಳಲ್ಲಿ ಡಿಜೆ ಡ್ಯಾನ್ಸ್ ಗಳಿಗೂ ನಿಷೇಧ ಹೇರಿದ್ದು, ಹೊಸವರ್ಷದಲ್ಲಿ ಮೋಜು ಮಾಡುತ್ತಿದ್ದವರು ಕರೋನಾ ನಿಯಮ ಪ್ರಕಾರವೇ ಆಚರಣೆ ಮಾಡಬೇಕಾಗಿದೆ ಎಂದಿದ್ದಾರೆ.

ವಿಶ್ವವಾಣಿ

### ಬ್ರಿಟನ್‌ನಿಂದ ಬೆಂಗಳೂರಿಗೆ ಬಂದ ತಾಯಿ, ಮಗಳಿಗೆ ಕರೋನಾ ದೃಢ
### ಹೆಚ್ಚಿನ ಮಾಹಿತಿಗೆ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಸ್ವಾಬ್ ಮಾದರಿ ರವಾನೆ

# ಬೆಂಗಳೂರಿಗೆ ಹೈಸ್ಪೀಡ್ ವೈರಸ್ ಪ್ರವೇಶ?

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಜಗತ್ತಿನೆಲ್ಲೆಡೆ ಆತಂಕ ಮೂಡಿಸಿರುವ ಹೊಸ ತಳಿಯ ಕರೋನಾ ವೈರಸ್ ಸಿಲಿಕಾನ್ ಸಿಟಿಯಲ್ಲಿ ಪತ್ತೆಯಾಗಿದೆ. ಬ್ರಿಟನ್‌ನಿಂದ ಬೆಂಗಳೂರಿಗೆ ಬಂದಿಳಿದಿದ್ದ ತಾಯಿ, ಮಗಳಿಗೆ ಕರೋನಾ ವರದಿ ದೃಢ ಪಟ್ಟಿದೆ. ಇವರಲ್ಲಿ ಪತ್ತೆಯಾಗಿರುವುದು ಹೊಸ ಸ್ವರೂಪದ ಕರೋನಾ ವೈರಸ್ ಎಂಬುದನ್ನು ಪತ್ತೆ ಮಾಡಲು ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಸ್ವಾಬ್ ಮಾದರಿಯನ್ನು ರವಾನೆ ಮಾಡಲಾಗಿದೆ.

ಡಿ.19ರಂದು ಯುಕೆಯಿಂದ ಇವರು ಸಿಲಿಕಾನ್ ಸಿಟಿಗೆ ಬಂದಿಳಿದಿದ್ದರು. ಬಳಿಕ ಖಾಸಗಿ ಲ್ಯಾಬ್‌ನಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾಗಿದ್ದರು. ವರದಿ ಬಂದಿದ್ದು, ಇವರಲ್ಲಿ ಕರೋನಾ ದೃಢಪಟ್ಟಿದೆ. ಈ ಹಿನ್ನೆಲೆ ಬಿಬಿಎಂಪಿ ಆರೋಗ್ಯಾಧಿಕಾರಿಗಳ ತಂಡ ಇಂದು ಭೇಟಿ ನೀಡಿ ಹೊಸ ವೈರಸ್ ತಳಿ ಪತ್ತೆ ಮಾಡಲು ಅವರ ಸ್ವಾಬ್ ಸಂಗ್ರಹ ಮಾಡಿದ್ದು, ಅದನ್ನು ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಬ್ರಿಟನ್‌ನಿಂದ ಬೆಂಗಳೂರಿಗೆ ಆಗಮಿಸಿದ ಮಂಡ್ಯದ ನಾಲ್ವರನ್ನು ವಿಮಾನ ನಿಲ್ದಾಣದಲ್ಲೇ ವಶಕ್ಕೆ ಪಡೆದು ಕ್ವಾರಂಟೈನ್ ಮಾಡಲಾಗಿದೆ ಎಂದು ಮಂಡ್ಯ ಜಿಲ್ಲಾ ಆರೋಗ್ಯಾಧಿಕಾರಿ ಮಂಚೇಗೌಡ ತಿಳಿಸಿದ್ದಾರೆ. ಮತ್ತೊಂದು ತಂಡದ ಇಬ್ಬರಿಗೆ ಮೈಸೂರಿನಲ್ಲಿ ಕ್ವಾರಂಟೈನ್ ಮಾಡಿದ್ದಾರೆ. ಯುಕೆಯಿಂದ ಬಂದ ಇವರಿಗೆ ಯಾವುದೇ ರೋಗ ಲಕ್ಷಣಗಳಿಲ್ಲದಿದ್ದರೂ, ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಿದ್ದು, ವರದಿಗಾಗಿ ನಿರೀಕ್ಷಿಸಲಾಗಿ

## ಯುಕೆಯಿಂದ ಉಡುಪಿಗೆ ಬಂದಿಳಿದ 8 ಮಂದಿ

**ಬ್ರಿಟನ್‌ನಿಂದ ಉಡುಪಿಗೆ ಬಂದಿಳಿದ 8 ಪ್ರಯಾಣಿಕರ ಕರೋನಾ ಪರೀಕ್ಷೆ ನಡೆಸಲಾಗಿದೆ. ಗಂಟಲು ದ್ರವ ಪರೀಕ್ಷೆಯ ವರದಿ ನಿರೀಕ್ಷೆಯಲ್ಲಿದೆ. ಕಾರ್ಕಳ-4, ಉಡುಪಿ- 3 ಮಂದಿ ಸೇರಿದಂತೆ ಕುಂದಾಪುರಕ್ಕೆ ಒಬ್ಬ ವ್ಯಕ್ತಿ ಯುಕೆಯಿಂದ ಬಂದಿಳಿದಿದ್ದಾರೆ. 8 ಮಂದಿಯನ್ನು 14 ದಿನಗಳ ಕ್ವಾರಂಟೈನ್‌ನಲ್ಲಿ ಇರುವಂತೆ ಸೂಚಿಸಲಾಗಿದೆ. ತುಮಕೂರಿನ ಐವರಿಗೆ ಕ್ವಾರಂಟೈನ್ ಬ್ರಿಟನ್‌ನಿಂದ ತುಮಕೂರು ಮರಳೂರು ದಿಣ್ಣೆಯ ನಾಲ್ವರು, ತಿಪಟೂರು ಪಟ್ಟಣದ ಓರ್ವ ವ್ಯಕ್ತಿ ಆಗಮಿಸಿದ್ದರು. ಇವರನ್ನು ಕೂಡ ಪ್ರತ್ಯೇಕವಾಗಿರುವಂತೆ ಸೂಚನೆ ನೀಡಲಾಗಿದೆ.**

ಉದಯವಾಣಿ
ಜನಮನದ ಜೀವನಾಡಿ

# ರೂಪಾಂತರ ಕೊರೊನಾ: ಮಾಹಿತಿ ಕೇಳಿದ 'ಹೈ'

## ಡಿ.7ರಿಂದ ಇಂಗ್ಲೆಂಡ್‌ನಿಂದ ಕರ್ನಾಟಕಕ್ಕೆ ಬಂದಿರುವ ಪ್ರಯಾಣಿಕರ ಮಾಹಿತಿ ಒದಗಿಸಲು ಸೂಚನೆ: ಸರ್ಕಾರ

**ಬೆಂಗಳೂರು:** ಇಂಗ್ಲೆಂಡ್‌ನಲ್ಲಿ ಹೊಸ ಮಾದರಿಯ ಕೊರೊನಾ ವೈರಸ್ ಪತ್ತೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅದರ ಹರಡುವಿಕೆ ತಡೆಯಲು ಕೈಗೊಂಡ ಮುಂಜಾಗ್ರತಾ ಕ್ರಮಗಳ ಕುರಿತು ಜ.5ರೊಳಗೆ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಕೊರೊನಾ ಸೋಂಕು ನಿಯಂತ್ರಣಕ್ಕೆ ಸೂಕ್ತ ಕ್ರಮ ಜರುಗಿಸಲು ಸರ್ಕಾರ ಮತ್ತು ಬಿಬಿಎಂಪಿಗೆ ನಿರ್ದೇಶಿಸಲು ಕೋರಿ ಸಲ್ಲಿಕೆಯಾಗಿರುವ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ್ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ನಡೆಸಿತು. ಈ ವೇಳೆ ಅರ್ಜಿದಾರರೊಬ್ಬರ ಪರ ವಕೀಲ ವಕೀಲ ಜಿ.ಆರ್.ಮೋಹನ್, ಇಂಗ್ಲೆಂಡ್‌ನಲ್ಲಿ ಹೊಸ ಮಾದರಿಯ ಕೊರೊನಾ ವೈರಸ್ ಪತ್ತೆಯಾಗಿದೆ.



ಈಗಾಗಲೇ ಬ್ರಿಟನ್‌ನಿಂದ ಸಾವಿರಾರು ಜನ ಕರ್ನಾಟಕಕ್ಕೆ ಬಂದಿರುವ ಸಾಧ್ಯತೆಯಿದೆ. ವಿಮಾನ ನಿಲ್ದಾಣಗಳಲ್ಲಿ ಆ ಪ್ರಯಾಣಿಕರ ಸೂಕ್ತವಾಗಿ ತಪಾಸಣೆ ನಡೆಸಿಲ್ಲ ಎಂಬ ಬಗ್ಗೆ ಮಾತು ಕೇಳಿಬಂದಿವೆ. ಹೀಗಾಗಿ ಆ ವೈರಸ್ ರಾಜ್ಯದಲ್ಲಿ ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿದರು. ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ರೂಪಾಂತರಗೊಂಡ ಕೊರೊನಾ ವೈರಸ್ ತಡೆಗೆ ಯಾವೆಲ್ಲಾ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರಿ ವಕೀಲರನ್ನು ಪ್ರಶ್ನಿಸಿತು.

ಇದಕ್ಕೆ ಸರ್ಕಾರದ ಪರ ವಕೀಲ ವಿಕ್ರಂ ಹುಯಿಲಗೋಳ್ ಉತ್ತರಿಸಿ, ಕೇಂದ್ರ ಸರ್ಕಾರದ ನಿರ್ದೇಶನದಂತೆ ಡಿ.7ರಿಂದ ಇಂಗ್ಲೆಂಡ್‌ನಿಂದ ಕರ್ನಾಟಕಕ್ಕೆ ಬಂದಿರುವ ಪ್ರಯಾಣಿಕರ ಮಾಹಿತಿ ಒದಗಿಸಲು ಬೆಂಗಳೂರು, ಮಂಗಳೂರು ವಿಮಾನ ನಿಲ್ದಾಣಗಳಿಗೆ ಸೂಚಿಸಲಾಗಿದೆ ಎಂದರು.

ಅದನ್ನು ಪರಿಗಣಿಸಿದ ನ್ಯಾಯಪೀಠ, ಎಷ್ಟು ಜನ ಇಂಗ್ಲೆಂಡ್‌ನಿಂದ ಕರ್ನಾಟಕಕ್ಕೆ ಬಂದಿದ್ದಾರೆ? ಆ ಪ್ರಯಾಣಿಕರ ವಿವರಗಳೇನು? ಅವರಲ್ಲಿ ಎಷ್ಟು ಜನರಿಗೆ ತಪಾಸಣೆ ನಡೆಸಲಾಗಿದೆ? ಎಷ್ಟು ಜನಕ್ಕೆ ಸೋಂಕು ದೃಢಪಟ್ಟಿದೆ? ಅವರಿಗೆ ಚಿಕಿತ್ಸೆ ಕಲ್ಪಿಸಲು ಯಾವೆಲ್ಲಾ ಕ್ರಮ ಕೈಗೊಳ್ಳಲಾಗಿದೆ? ಎಂಬುದರ ಕುರಿತು ಮುಂದಿನ ವಿಚಾರಣೆ ವೇಳೆ ವರದಿ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಜ.5ಕ್ಕೆ ಮುಂದೂಡಿತು.

### ಯಾವ ವಲಯದಲ್ಲಿ ಎಷ್ಟು ಮಂದಿ?

ಬಿಬಿಎಂಪಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಇಂಗ್ಲೆಂಡ್‌ನಿಂದ ಆಗಮಿಸಿರುವ 211 ಪ್ರಯಾಣಿಕರ ಮಾಹಿತಿಯನ್ನು ಸರ್ಕಾರ ಬಿಬಿಎಂಪಿ ವಲಯ ಆರೋಗ್ಯಾಧಿಕಾರಿಗಳಿಗೆ ನೀಡಿದೆ. ಮಂಗಳವಾರ ಬೆಳಗ್ಗೆಯಿಂದಲೇ ಸೋಂಕು ಪರೀಕ್ಷೆ ನಡೆಯುತ್ತಿದೆ. ಈ ನಡುವೆ ಬೊಮ್ಮನಹಳ್ಳಿ ವಲಯದಲ್ಲಿ ಮಾತ್ರ ಇಬ್ಬರಲ್ಲಿ ಸೋಂಕು ದೃಢಪಟ್ಟಿದೆ. ಬಿಬಿಎಂಪಿ ಪಶ್ಚಿಮ ವಲಯದಲ್ಲಿ 48, ಮಹದೇವಪುರದಲ್ಲಿ 40, ಬೊಮ್ಮನ ಹಳ್ಳಿಯಲ್ಲಿ 38, ದಕ್ಷಿಣ ವಲಯ 29, ಪಶ್ಚಿಮ ವಲಯ 27, ಯಲಹಂಕ 14, ಆರ್. ಆರ್. ನಗರ 13 ಹಾಗೂ ದಾಸರಹಳ್ಳಿಯಲ್ಲಿ ಇಬ್ಬರು ಸೇರಿ ನಗರಕ್ಕೆ ಇಂಗ್ಲೆಂಡ್‌ನಿಂದ 211 ಮಂದಿ ಆಗಮಿಸಿದ್ದಾರೆ. ಎಲ್ಲರನ್ನೂ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಇಬ್ಬರಲ್ಲಿ ಸೋಂಕು ದೃಢಪಟ್ಟಿದೆ. ಕೆಲವರ ಪರೀಕ್ಷಾ ವರದಿ ಬುಧವಾರ ಬರಲಿದೆ ಎಂದು ಅಧಿಕಾರಿಗಳು ಮಾಹಿತಿ ತಿಳಿಸಿದ್ದಾರೆ.

### ನಗರದಲ್ಲಿ ಕೊರೊನಾ

585 ಹೊಸ ಪ್ರಕರಣಗಳು
686 ಗುಣಮುಖರು
08 ಸೋಂಕಿತರ ಸಾವು
3.87ಲಕ್ಷ ಒಟ್ಟಾರೆ ಪ್ರಕರಣಗಳು
3.7 ಲಕ್ಷ ಒಟ್ಟಾರೆ ಗುಣಮುಖರು
4279 ಒಟ್ಟಾರೆ ಸಾವು
9148 ಸಕ್ರಿಯ ಪ್ರಕರಣಗಳು

### ಡೀಸಿಗಳ ಜತೆ ಸಂವಾದ

**ಬೆಂಗಳೂರು:** ಕೊರೊನಾ ವೈರಸ್ ನ ಎರಡನೇ ಅಲೆ, ರೂಪಾಂತರ ಮತ್ತು ವ್ಯಾಕ್ಸಿನ್ ಕುರಿತು ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಬುಧವಾರ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ. ವಿಧಾನಸೌಧದ ಮೂರನೇ ಮಹಡಿ ಸಮಿತಿ ಕೊಠಡಿಯಲ್ಲಿ ಮಧ್ಯಾಹ್ನ 2.30 ಕ್ಕೆ ವಿಡಿಯೋ ಕಾನ್ಫರೆನ್ಸ್ ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಕೊರೊನಾ ಹಿನ್ನೆಲೆಯಲ್ಲಿ ಕ್ರಿಸ್ ಮಸ್ ಹಾಗೂ ಹೊಸ ವರ್ಷಾಚರಣೆ ವೇಳೆ ತೆಗೆದುಕೊಳ್ಳಬೇಕಾದ ಕ್ರಮ, ಹಾಗೂ ವಿಶ್ವದಲ್ಲಿ ಕೊರೊನಾ ರೂಪಾಂತರ ಮತ್ತು ಎರಡನೇ ಅಲೆಯ ಬಗ್ಗೆ ಚರ್ಚೆಯಾಗುತ್ತಿರುವುದರಿಂದ ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚೆ ನಡೆಯಲಿದೆ ಎಂದು ತಿಳಿದು ಬಂದಿದೆ.

**ಶುಕ್ರವಾರ ಪ್ರಧಾನಿ ಸಂವಾದ:** ಪ್ರಧಾನಿ ನರೇಂದ್ರ ಮೋದಿ ಕೊರೊನಾ ಹಿನ್ನೆಲೆಯಲ್ಲಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಶುಕ್ರವಾರ ವಿಡಿಯೋ ಸಂವಾದ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

### ಬಿಬಿಎಂಪಿ ಆಯುಕ್ತರಿಗೆ ಕೊರೊನಾ ಸೋಂಕು

**ಬೆಂಗಳೂರು:** ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರಿಗೂ ಮಂಗಳವಾರ ಕೊರೊನಾ ಸೋಂಕು ದೃಢಪಟ್ಟಿದ್ದು, ಆಯುಕ್ತರ ಸಂಪರ್ಕಕ್ಕೆ ಬಂದ ಪಾಲಿಕೆ ಅಧಿಕಾರಿಗಳು, ಸಾರ್ವಜನಿಕರು ಸೋಂಕು ಪರೀಕ್ಷೆ ಮಾಡಿಸಿಕೊಳ್ಳುವಂತೆ ಆಯುಕ್ತರು ಮನವಿ ಮಾಡಿದ್ದಾರೆ.



ಸೋಮವಾರ ರಾತ್ರಿ ತೀವ್ರ ಜ್ವರ, ಕೆಮ್ಮು, ಶೀತ, ಮೈಕೈ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಯುಕ್ತರು ಮಂಗಳವಾರ ಬೆಳಗ್ಗೆ ಆ್ಯಂಟಿಜೆನ್ ಸೋಂಕು ಪರೀಕ್ಷೆಗೆ ಒಳಗಾಗಿದ್ದರು. ಈ ವೇಳೆ ಸೋಂಕು ದೃಢಪಟ್ಟಿದೆ. ಆ್ಯಂಟಿಜೆನ್ ಪರೀಕ್ಷೆ ಮಾಡಿಸಿಕೊಂಡ ನಂತರ ಗಂಟಲು ದ್ರವ ಮಾದರಿ( ಆರ್‌ಟಿಪಿಸಿಆರ್) ಪರೀಕ್ಷೆಗೆ ಒಳಪಟ್ಟಿದ್ದು ಇದರಲ್ಲಿಯೂ ಸೋಂಕು ದೃಢಪಟ್ಟಿದೆ. ವೈದ್ಯರ ಸಲಹೆ ಮೇರೆಗೆ ಕ್ರೆಸೆಂಟ್ ರಸ್ತೆಯ ಮಲ್ಲಿಗೆ ಆಸ್ಪತ್ರೆಗೆ ದಾಖಲಾಗಿದ್ದು, ಡಾ.ಖಾನ್ ಎಂಬವರು ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಆಯುಕ್ತರು ತಿಳಿಸಿದ್ದಾರೆ.

ಇತ್ತೀಚೆಗೆ ಸಭೆ, ಸಮಾರಂಭದಲ್ಲಿ ಭಾಗಿಯಾದ ಪಾಲಿಕೆ ವಿಶೇಷ ಆಯುಕ್ತರು, ಅಧಿಕಾರಿ, ಸಿಬ್ಬಂದಿ ಕ್ವಾರಂಟೈನ್‌ಗೆ ಸೂಚಿಸಲಾಗಿದ್ದು, ಸೋಂಕಿನ ಲಕ್ಷಣ ಕಂಡು ಬಂದರೆ ಪರೀಕ್ಷೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

**ಸರಣಿ ಕಾರ್ಯಕ್ರಮ ನಡೆಸಿದ್ದರು:** ಕಳೆದ 1 ವಾರದಿಂದ ಆಯುಕ್ತರು ಸೈಕ್ಲಿಂಗ್ ಜಾಥಾ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಹೀಗಾಗಿ, ಹೆಚ್ಚು ಜನ ಸೋಂಕು ಪರೀಕ್ಷೆಗೆ ಒಳಗಾಗಬೇಕೇ ಎನ್ನುವ ಪ್ರಶ್ನೆ ಉದ್ಭವವಾಗಿದೆ. ಈ ಸಂಬಂಧ 'ಉದಯವಾಣಿ'ಯೊಂದಿಗೆ ಮಾತನಾಡಿದ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ವಿಜಯೇಂದ್ರ, ಮಾಸ್ಕ್ ಧರಿಸದೆ 10ರಿಂದ 15 ನಿಮಿಷ ಒಬ್ಬರೊಂದಿಗೆ ಮಾತನಾಡಿದ್ದರೆ ಅವರನ್ನು ಪ್ರಾಥಮಿಕ ಸಂಪರ್ಕಿತರು ಎಂದು ಪರಿಗಣಿಸಲಾಗುತ್ತದೆ. ಇಲ್ಲಿಯವರೆಗೆ ಆಯುಕ್ತರೊಂದಿಗೆ ನೇರ ಸಂಪರ್ಕದಲ್ಲಿದ್ದ 10ಜನರನ್ನು ಗುರುತಿಸಿ ಕ್ವಾರಂಟೈನ್ ಮಾಡಲಾಗಿದೆ. ಬುಧವಾರ ಪತ್ತೆ ಕಾರ್ಯ ಮುಂದುವರಿಯಲಿದೆ. ಕೊರೊನಾ ಲಕ್ಷಣ ಕಂಡುಬಂದರೆ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಿ ಎಂದು ಮನವಿ ಮಾಡಿದರು.

### ವಿದೇಶದಿಂದ ಬಂದವರ ಮೇಲೆ ನಿಗಾವಹಿಸಿ

**ಬೆಂಗಳೂರು:** ಕೊರೊನಾ ಹಿನ್ನೆಲೆಯಲ್ಲಿ ವಿದೇಶದಿಂದ ಬರುವ ಪ್ರಯಾಣಿಕರನ್ನು ಪ್ರತ್ಯೇಕಿಸಬೇಕು ಎಂದು ವಿಧಾನಸಭೆಯಲ್ಲಿ ಈ ಹಿಂದೆ ನಾನು ಪ್ರಸ್ತಾಪಿಸಿದ್ದೆ ಆದರೆ ನನ್ನ ಒತ್ತಾಯವನ್ನು ಸರ್ಕಾರ ನಿರ್ಲಕ್ಷ್ಯ ಮಾಡಿತು ಎಂದು ಶಾಸಕ ಎಚ್.ಕೆ.ಪಾಟೀಲ್ ಹೇಳಿದ್ದಾರೆ. ಈ ಬಗ್ಗೆ ಸಿಎಂ, ಆರೋಗ್ಯ ಸಚಿವ ಸುಧಾಕರ್ ಅವರಿಗೆ ಬಹಿರಂಗ ಪತ್ರ ಬರೆದಿರುವ ಅವರು ಇಂಗ್ಲೆಂಡ್ ನಲ್ಲಿ ಈಗಾಗಲೇ ಕೊರೊ ನಾದ 2ನೇ ಅಲೆ ಕಾಣಿಸಿಕೊಂಡಿದೆ. ವಿದೇಶಿ ಪ್ರಯಾಣಿಕರ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ. ಮಾಹಿತಿಯಂತೆ ಈಗಾಗಲೇ 12300 ಪ್ರಯಾಣಿಕರು ಕೊರೊನಾ ರೂಪಾಂತರಗೊಂಡ ದೇಶ ದಿಂದ ಬಂದಿದ್ದಾರೆ. ಅಧಿಕಾರಿಗಳು ತಪಾಸಣೆ ನಡೆಸದೆ ನಿರ್ಲಕ್ಷ್ಯ ತೋರಿದ್ದು ಸರ್ಕಾರ ಗಮನ ಹರಿಸಬೇಕು ಎಂದಿದ್ದಾರೆ.

## ಮಾರುಕಟ್ಟೆಗಳಲ್ಲಿ ಮುನ್ನೆಚ್ಚರಿಕೆಗೆ ಕ್ರಮ

**ಬೆಂಗಳೂರು:** ಮಾರುಕಟ್ಟೆಗಳಲ್ಲಿ ಕೈಗೊಳ್ಳಬೇಕಾದ ಕೊರೊನಾ ಸೋಂಕಿನ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸುತ್ತೋಲೆ ಹೊರಡಿಸಿದೆ.



ಅಂಗಡಿ ಹಾಗೂ ಮಾರುಕಟ್ಟೆಗಳಲ್ಲಿ ಮಾಲೀಕರು ಮತ್ತು ಗ್ರಾಹಕರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಸೇರಿ ಕೊರೊನಾ ವಿವಿಧ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಮಳಿಗೆಗಳ ಪ್ರವೇಶ ದ್ವಾರದಲ್ಲಿಯೇ ಸೋಂಕು ನಿವಾರಕ ದ್ರಾವಣ ಇಡಬೇಕು. ಎಲ್ಲಾ ಮಳಿಗೆಗಳು ಕಡ್ಡಾಯವಾಗಿ 6 ಅಡಿ ಅಂತರದಲ್ಲಿ ಗುರುತು ಹಾಕಿ, ಗ್ರಾಹಕರು ಅಂತರ ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು, ನಿಯಮ ಉಲ್ಲಂಘಿಸುವ ಅಂಗಡಿ ಮಾಲೀಕರಿಗೆ ದಂಡ ವಿಧಿಸಲಾಗುವುದು. ಹೆಚ್ಚಿನ ದಂಡ ಪ್ರಕರಣ ವರದಿಯಾದಲ್ಲಿ ಮಾರುಕಟ್ಟೆಯನ್ನು ಮುಚ್ಚಲಾಗುವುದು ಎಂದು ಸುತ್ತೋಲೆಯಲ್ಲಿ ಇಲಾಖೆ ಆಯುಕ್ತ ಪಂಕಜ್ ಕುಮಾರ್ ಪಾಂಡೆ ಸೂಚಿಸಿದ್ದಾರೆ.

ಮಾರುಕಟ್ಟೆ ಪ್ರವೇಶದ್ವಾರ, ಇನ್ನಿತರ ಪ್ರದೇಶಗಳಲ್ಲಿ ಸಾಮೂಹಿಕ ಥರ್ಮಲ್ ಸ್ಕ್ರೀನಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಮಾಸ್ಕ್ ಖರೀದಿಸಲು ಸಾಧ್ಯವಾಗದವರಿಗೆ ಉಚಿತ ಮಾಸ್ಕ್ ನೀಡುವ ಮೂಲಕ ಮಳಿಗೆಗಳ ಮಾಲೀಕರು ನಿಯಮ ಪಾಲನೆಗೆ ಗ್ರಾಹಕರನ್ನು ಉತ್ತೇಜಿಸಬೇಕು. ಜನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಲು ಮಾರ್ಷಲ್, ಗೃಹರಕ್ಷಕ ದಳ, ಸ್ವಯಂ ಸೇವಕರ ಸೇವೆ ಬಳಸಿಕೊಳ್ಳಬೇಕು. ದೈನಂದಿನ ಬಳಕೆ ವಸ್ತುಗಳ ಖರೀದಿಗೆ ಆನ್‌ಲೈನ್ ವ್ಯವಸ್ಥೆ ಉತ್ತೇಜಿಸಬೇಕು ಎಂದು ತಿಳಿಸಿದ್ದಾರೆ.

## ವಿಮಾನ ನಿಲ್ದಾಣದಲ್ಲಿ ಸೋಂಕು ಪರೀಕ್ಷೆಗೆ ಕ್ರಮ

**ಬೆಂಗಳೂರು:** 2ನೇ ಸಲವೂ ನಾವು ಎಡವಟ್ಟು ಮಾಡಿಕೊಂಡಿದ್ದೇವೆಯೇ? ಹಾಗೊಂದು ಪ್ರಬಲ ಶಂಕೆ ಈಗ ಎದುರಾಗಿದೆ.

ಈ ಹಿಂದೆ ಕೊರೊನಾ ಸೋಂಕು ಆರಂಭದಲ್ಲಿ ಕೆಲ ತಿಂಗಳ ಬಳಿಕ ವಿಮಾನ ನಿಲ್ದಾಣಗಳನ್ನು ಬಂದ್ ಮಾಡಲಾಗಿತ್ತು. ಅಲ್ಲಿಯವರೆಗೂ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದ ಪ್ರಯಾಣಿಕರಿಗೆ ಕೇವಲ ಥರ್ಮಲ್ ಸ್ಕ್ರೀನಿಂಗ್ ಮಾತ್ರ ಮಾಡಲಾಗುತ್ತಿತ್ತು.

ಕಳೆದ ಒಂದು ತಿಂಗಳಿಂದ ಬ್ರಿಟನ್‌ನಲ್ಲಿ ರೂಪಾಂತರಗೊಂಡ ಕೊರೊನಾ ವೈರಸ್ ಅಬ್ಬರ ಹೆಚ್ಚಿದ್ದರೂ, ವಿಮಾನ ನಿಲ್ದಾಣದಲ್ಲಿ ಕೊರೊನಾ ಪರೀಕ್ಷೆ ಮತ್ತು ಪ್ರಯಾಣಿಕರ ಕಡ್ಡಾಯ ಪರೀಕ್ಷೆಗೆ ಕ್ರಮ ಕೈಗೊಂಡಿಲ್ಲ. ಡಿ.19, 20 ರಂದು ಬಂದ 2 ವಿಮಾನಗಳಲ್ಲಿ 500ಕ್ಕೂ ಹೆಚ್ಚು ಪ್ರಯಾಣಿಕರ ಪೈಕಿ 138 ಮಂದಿ ಪರೀಕ್ಷೆ ಮಾಡಿಸಿರಲಿಲ್ಲ. ಇನ್ನು ಲಂಡನ್‌ನಿಂದ ವಾರಕ್ಕೆ 4 ಬ್ರಿಟಿಷ್ ಏರ್‌ವೇಸ್ ಮತ್ತು ಎರಡು ಏರ್ ಇಂಡಿಯಾ ವಿಮಾನ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸುತ್ತದೆ. ಡಿ.1 ರಿಂದ 16 ವಿಮಾನ ಬೆಂಗಳೂರಿಗೆ ಬಂದಿದ್ದು, ಅಂದಾಜು 3 ಸಾವಿರಕ್ಕೂ ಹೆಚ್ಚು ಮಂದಿ ಪ್ರಯಾಣಿಕರು ಆಗಮಿಸಿದ್ದಾರೆ. ಪೈಕಿ ಎಲ್ಲರೂ ಕಡ್ಡಾಯ ಕೊರೊನಾ ಪರೀಕ್ಷೆಯಾಗಿಲ್ಲ, ನಿಯಮ ಸಡಿಲಿಕೆ ಹಿನ್ನೆಲೆ ಅನೇಕರು ನೇರವಾಗಿ ಮನೆಗೆ ತೆರಳಿದ್ದಾರೆ. ಇಂತಹರ ಪತ್ತೆ ಕಾರ್ಯ ನಡೆದಿದೆ. ಅಲ್ಲದೆ, ಆರೋಗ್ಯ ಸಚಿವರೂ ಕಳೆದ ಎರಡು ವಾರದಿಂದ ಇಂಗ್ಲೆಂಡ್‌ನಿಂದ ಬಂದವರು ಕೊರೊನಾ ಪರೀಕ್ಷೆಗೊಳಗಾಗುವಂತೆ ಮನವಿ ಮಾಡಿದ್ದಾರೆ.

**ಮಂಗಳವಾರದಿಂದ ವ್ಯವಸ್ಥೆ:** ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್-19 ಪರೀಕ್ಷಾ ಸೌಲಭ್ಯ ಆರಂಭವಾಗಿದೆ. ಆರ್‌ಟಿಪಿಸಿಆರ್ ಪರೀಕ್ಷಾ ವರದಿಯನ್ನು 15 ನಿಮಿಷಗಳಿಗೂ ಕಡಿಮೆ ಅವಧಿಯಲ್ಲಿ ನೀಡಲಾಗುತ್ತದೆ. ಸಾಮಾನ್ಯ ಆರ್.ಟಿ-ಪಿ.ಸಿ.ಆರ್. ಪರೀಕ್ಷೆ ಪಡೆಯಲು 6 ಗಂಟೆಗಳಲ್ಲಿ ನೀಡಲಾಗುತ್ತದೆ. ಪರೀಕ್ಷೆ ಫಲಿತಾಂಶಗಳು ಬರುವವರೆಗೆ, ಈ ಪರೀಕ್ಷೆಗೆ ಒಳಗಾದವರಿಗೆ ನಿರೀಕ್ಷಣಾ ಕೊಠಡಿ ಸೌಲಭ್ಯವಿದೆ. ರ್‍ಯಾಪಿಡ್ ಆರ್‌ಟಿಪಿಸಿಆರ್ ಪರೀಕ್ಷೆಗೆ 2400 ರೂ, ಸಾಮಾನ್ಯ ಆರ್‌ಟಿಪಿಸಿಆರ್ ಪರೀಕ್ಷೆಗೆ 800 ರೂ. ನಿಗದಿಪಡಿಸಲಾಗಿದೆ. ಪಾಸಿಟಿವ್ ವರದಿ ಬಂದ ಪ್ರಯಾಣಿಕರನ್ನು ಆರೋಗ್ಯ ಇಲಾಖೆ ಅಧಿಕಾರಿಗಳ ಸೂಚನೆಯಂತೆ ಸಾಂಸ್ಥಿಕ ಕ್ವಾರಂಟೈನ್ ಅಥವಾ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ ಎಂದು ವಿಮಾನ ನಿಲ್ದಾಣ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

# ಪೌರಕಾರ್ಮಿಕರಿಗೆ ವಾರದ ರಜೆ

## ಹೆಚ್ಚುವರಿ ಶೇ.16 ಸಿಬ್ಬಂದಿ ನೇಮಕಕ್ಕೆ ಬಿಬಿಎಂಪಿಗೆ ಕಾರ್ಮಿಕ ಇಲಾಖೆ ಸ್ಪಷ್ಟೀಕರಣ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರಿಗೂ ವಾರಕ್ಕೆ ಒಂದು ದಿನ ರಜೆ, ರಾಷ್ಟ್ರೀಯ ರಜೆ ಹಾಗೂ ಹಬ್ಬದ ದಿನಗಳಲ್ಲಿ ರಜೆ ನೀಡುವ ನಿಟ್ಟಿನಲ್ಲಿ ಶೇ.16ರಷ್ಟು ಹೆಚ್ಚುವರಿ ಸಿಬ್ಬಂದಿ ನೇಮಿಸಿಕೊಳ್ಳಲು ಕ್ರಮ ವಹಿಸುವಂತೆ ಕಾರ್ಮಿಕ ಇಲಾಖೆ ಬಿಬಿಎಂಪಿಗೆ ಸ್ಪಷ್ಟೀಕರಣ ನೀಡಿದೆ.



ನಗರದಲ್ಲಿ ಕಸ ವಿಲೇವಾರಿಯಲ್ಲಿ ಜವಾಬ್ದಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಬಿಲ್ ಪಾವತಿ ಮಾಡುವ ಸಂಬಂಧ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್, ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಿ.ರಂದೀಪ್ ಹಾಗೂ ಗುತ್ತಿಗೆದಾರರೊಂದಿಗೆ ಇತ್ತೀಚೆಗೆ ಮಲ್ಲೇಶ್ವರದ ಐಪಿಪಿ ಕೇಂದ್ರದಲ್ಲಿ ಆಂತರಿಕ ಸಭೆ ನಡೆಸಲಾಗಿದ್ದು, ವಿವಿಧ ವಿಚಾರ ಚರ್ಚೆ ಆಗಿದೆ.

### ಆಯುಕ್ತರ ಪ್ರಮುಖ ನಿರ್ದೇಶನ

1. ಸಗಟು ತ್ಯಾಜ್ಯ ಉತ್ಪಾದಕರಿಂದ ಮನೆ-ಮನೆ ಕಸ ಸಂಗ್ರಹ ಮಾಡುವ ವಾಹನ ಕಸ ಸಂಗ್ರಹ ಮಾಡುವಂತಿಲ್ಲ. ಮಾಡಿದರೆ ಏಜೆನ್ಸಿ ಕಾರ್ಯಾದೇಶ ರದ್ದು.
2. ಜ.1ರಿಂದ ಜಿಪಿಎಸ್ ಹಾಜರಾತಿ ಇರುವ ವಾಹನಗಳಿಗೆ ಮಾತ್ರ ಬಿಲ್ ಪಾವತಿ, ಮ್ಯಾನುವಲ್ ಬಿಲ್ ಪಾವತಿ ಇಲ್ಲ.
3. 2021ರ ಜನವರಿಯಿಂದ ಹೊಸ ಟೆಂಡರ್ ದಾರರ ಕಾರ್ಯಕ್ಷಮತೆ ಪರಿಶೀಲನೆ
4. ಭೂಭರ್ತಿ ಹಾಗೂ ಹಸಿಕಸ ಸಂಸ್ಕರಣಾ ಘಟಕಗಳಲ್ಲಿ ಸಂಜೆ 7ಗಂಟೆವರೆಗೆ ಕಸ ವಿಲೇವಾರಿ ಮಾಡುವುದಕ್ಕೆ ಅವಕಾಶ
5. ಗುತ್ತಿಗೆದಾರರ ಸೇವಾ ತೆರಿಗೆ ಸಮಸ್ಯೆ ಪರಿಹರಿಸಲು ನೋಡಲ್ ಅಧಿಕಾರಿ ನೇಮಕಕ್ಕೆ ಕ್ರಮ

ಕಾರ್ಮಿಕ ಇಲಾಖೆ ಪ್ರಕಾರ ವಾರಕ್ಕೆ ಒಂದು ದಿನ ರಾಷ್ಟ್ರೀಯ ರಜೆ, ಹಬ್ಬದ ರಜೆ ಸೇರಿ 10 ದಿನ ಕಡ್ಡಾಯ ರಜೆ ನೀಡಬೇಕಾಗುತ್ತದೆ. ಇದಕ್ಕಾಗಿ ಶೇ.16 ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡಿಕೊಳ್ಳುವ ಅವಶ್ಯಕತೆ ಇದೆ. ಅಲ್ಲದೆ, ಪ್ರತಿ ತಿಂಗಳು 10ರ ಒಳಗಾಗಿ ವೇತನ ಪಾವತಿ ಸೇರಿ ಹಲವು ಸಲಹೆ ನೀಡಿದೆ.

ಈ ಆಧಾರದ ಮೇಲೆ ನಗರದಲ್ಲಿ ಶೇ.16 ಹೆಚ್ಚುವರಿ ಪೌರಕಾರ್ಮಿಕರು (ಚಾಲಕರು ಹಾಗೂ ಸಹಾಯಕ) ನೇಮಿಸಿಕೊಳ್ಳುವ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಬಿಬಿಎಂಪಿ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

**ಕಡ್ಡಾಯ ಜಿಪಿಎಸ್:** ಎಲ್ಲಾ ಗುತ್ತಿಗೆದಾರರು ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳ ಮಾಹಿತಿ ಸಂಗ್ರಹ ಮಾಡಿ ಪಿಎಂಯು ಯೂನಿಟ್‌ನ ಮೂಲಕ ಆರ್‌ಎಫ್‌ಐಡಿ ಕಾರ್ಡ್ ವ್ಯವಸ್ಥೆ ಕಲ್ಪಿಸಬೇಕು. ಎಲ್ಲಾ ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳಿಗೆ ಜಿಪಿಎಸ್ ಅಳವಡಿಸಬೇಕು ಎಂದು ನಿರ್ದೇಶನ ನೀಡಲಾಗಿದೆ. ಬಿಲ್ ತಡವಾಗಿ ಪಾವತಿ ಆಗುತ್ತಿರುವುದರಿಂದ ಕಾರ್ಮಿಕರಿಗೆ ಸಕಾಲದಲ್ಲಿ ವೇತನ ನೀಡಲು ಸಾಧ್ಯವಾಗುತ್ತಿಲ್ಲ, ಅಗತ್ಯ ಸೇವೆಗೂ ತೊಡಕಾಗಿದೆ ಎಂದು ಗುತ್ತಿಗೆದಾರರು ಸಭೆಯಲ್ಲಿ ದೂರಿದ್ದಾರೆ.

ಸಂಯುಕ್ತ ಕರ್ನಾಟಕ

## ವಾರ್ಡ್‌ಗಳ ಸಂಖ್ಯೆ 243ಕ್ಕೆ ಏರಿಕೆ । ಬಿಬಿಎಂಪಿಯ ವ್ಯಾಪ್ತಿ ಮತ್ತಷ್ಟು ಹಿಗ್ಗಲಿದೆ

# ಪಾಲಿಕೆ ಕಾಯ್ದೆಗೆ ರಾಜ್ಯಪಾಲರ ಅಂಕಿತ

**ಸಂ.ಕ.ಸಮಾಚಾರ ಬೆಂಗಳೂರು**

ವಿಧಾನಮಂಡಲದಲ್ಲಿ ಅಂಗೀಕಾರಗೊಂಡಿದ್ದ ಬಿಬಿಎಂಪಿ ಕಾಯ್ದೆಗೆ ರಾಜ್ಯಪಾಲರ ಅಂಕಿತ ಬಿದ್ದಿದ್ದು ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಕಾಯ್ದೆಯ ಅಧಿಸೂಚನೆಯನ್ನು ಸರ್ಕಾರ ಹೊರಡಿಸಿದೆ.

ಬಿಬಿಎಂಪಿ ವ್ಯಾಪ್ತಿಯನ್ನು ಹಿಗ್ಗಿಸುವ ಮತ್ತು ಆಡಳಿತ ಯಂತ್ರದಲ್ಲಿ ಬದಲಾವಣೆ ತರುವ ಬಿಬಿಎಂಪಿ ಕಾಯ್ದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಈ ಸಂಬಂಧ ಸರ್ಕಾರ ಅಧಿಸೂಚನೆಯನ್ನು ಹೊರಡಿಸಿದೆ. ಡಿ.7ರಿಂದ 10ರವರೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಬಿಬಿಎಂಪಿ ವಿಧೇಯಕಕ್ಕೆ ಅಂಗೀಕಾರ ಪಡೆಯಲಾಗಿತ್ತು. ಇದೀಗ ವಿಧಾನಮಂಡಲದಲ್ಲಿ ಅಂಗೀಕಾರ ಪಡೆದ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕುವ ಮೂಲಕ ಬಿಬಿಎಂಪಿ ಕಾಯ್ದೆ ಜಾರಿಯಾಗಿದೆ.

ಅಧಿಸೂಚನೆ ಮೂಲಕ ಕಾಯ್ದೆ ಜಾರಿಯಾದ ಹಿನ್ನೆಲೆ ಮತ್ತು ಬಿಬಿಎಂಪಿ ಚುನಾವಣೆ ನಡೆಸುವ ಸಂಬಂಧ ಹೈಕೋರ್ಟ್ ಆದೇಶಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಸರ್ಕಾರ ಬಿಬಿಎಂಪಿ ವಾರ್ಡ್‌ಗಳನ್ನು 243ಗೆ ಹೆಚ್ಚಿಸುವ ಮರವಿಂಗಡನೆ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ. ಬಿಬಿಎಂಪಿ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕಿರುವುದರಿಂದ ಬಿಬಿಎಂಪಿ ಚುನಾವಣೆಗೆ ಹೈಕೋರ್ಟ್ ನೀಡಿದ್ದ ನಿರ್ದೇಶನವನ್ನು ಪ್ರಶ್ನಿಸಿ ಸರ್ಕಾರ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿರುವುದರಿಂದ ಈ ಕಾಯ್ದೆಯ ವಿಚಾರಗಳನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿ ಪಾಲಿಕೆ ಚುನಾವಣೆಯನ್ನು ಮುಂದಕ್ಕೆ ಹಾಕಬಹುದಾಗಿದೆ.





ಈ ನೂತನ ಬಿಬಿಎಂಪಿ ಕಾಯ್ದೆಯ ಪ್ರಕಾರ ಬಿಬಿಎಂಪಿಯ ವ್ಯಾಪ್ತಿ ಮತ್ತಷ್ಟು ಹಿಗ್ಗಲಿದೆ. ಮೇಯರ್ ಮತ್ತು ಉಪಮೇಯರ್ ಅಧಿಕಾರಾವಧಿ ಈಗಿನ ಒಂದು ವರ್ಷದಿಂದ ಎರಡೂವರೆ ವರ್ಷಕ್ಕೆ ಹೆಚ್ಚಾಗಲಿದೆ.

ನೂತನ ಕಾಯ್ದೆಯ ಪ್ರಕಾರ ಬಿಬಿಎಂಪಿ ಸುತ್ತಲೂ ಇರುವ 1 ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮ, ಗ್ರಾಪಂ, ಪಪಂ ಹಾಗೂ ನಗರಸಭೆಗೆ ಸೇರಿದ ಪ್ರದೇಶಗಳು ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಲಿವೆ. ಆ ಮೂಲಕ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198 ರಿಂದ 243ಕ್ಕೆ ಏರಿಕೆಯಾಗಲಿದೆ.

ಬಿಬಿಎಂಪಿಗೆ ಪ್ರಸ್ತುತ ಇರುವ ಬಿಬಿಎಂಪಿ ಆಯುಕ್ತರ ಹುದ್ದೆಯನ್ನು ಮುಖ್ಯ ಹುದ್ದೆಯಾಗಿ ಮಾಡಲಾಗುತ್ತದೆ. ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದವರನ್ನು ಮುಖ್ಯ ಹುದ್ದೆಗೆ ನೇಮಕ ಮಾಡಲಾಗುವುದು. ಮುಖ್ಯ ಆಯುಕ್ತರ ಅಧಿಕಾರಾವಧಿ 2 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿಯೋಜನಮೆ ಮಾಡಬೇಕಾಗುತ್ತದೆ.

ಹಾಗೆಯೇ ಸಾರ್ವಜನಿಕರಿಗೆ ತುರ್ತಾಗಿ ಸ್ಪಂದಿಸಲು ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ. ಇದು ಮಾತ್ರವಲ್ಲದೆ, ಪ್ರತಿ ವಿಧಾನಸಭಾ ಕ್ಷೇತ್ರದ ವಾರ್ಡ್‌ನಲ್ಲಿ ಪ್ರಾಂತ್ಯ ಸಭೆಗಳು ನಡೆಯಲಿವೆ. ಈ ಸಭೆಗಳಲ್ಲಿ ಪ್ರತಿ ಮತದಾರರೂ ಸದಸ್ಯರಾಗಿರುತ್ತಾರೆ. ಹಾಗೆಯೇ ಶಾಸಕರ ಅಧ್ಯಕ್ಷತೆಯಲ್ಲಿ ವಿಧಾನಸಭಾ ಸಮಾಲೋಚನಾ ಸಮಿತಿ ರಚನೆಯಾಗಲಿದೆ. ವಾರ್ಡ್‌ಗಳಲ್ಲಿ ಚುನಾಯಿತರಾದವರು ಸದಸ್ಯರಾಗಿರುತ್ತಾರೆ. ಈ ಸಮಿತಿಯ ಅಧಿಕಾರಾವಧಿ 30 ತಿಂಗಳು ಇರಲಿದೆ.

ಸಂಯುಕ್ತ ಕರ್ನಾಟಕ

# ಬಿಬಿಎಂಪಿ ಆಯುಕ್ತರಿಗೂ ನಂಜು

**ಬೆಂಗಳೂರು:** ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರಿಗೂ ಕೊರೊನಾ ಸೋಂಕು ದೃಢಪಟ್ಟಿದೆ.

ಸೋಮವಾರ ರಾತ್ರಿ ತೀವ್ರ ಜ್ವರ, ಕೆಮ್ಮು, ಶೀತಾ ಮೈಕೈ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಕೊರೊನಾ ತಪಾಸಣೆ ಮಾಡಿಸಿಕೊಂಡಾಗ ಪರೀಕ್ಷೆಯಲ್ಲಿ ಸೋಂಕು ಇರುವುದು ದೃಢಪಟ್ಟಿತ್ತು.



ವೈದ್ಯರ ಸಲಹೆ ಮೇರೆಗೆ ಆಯುಕ್ತರು ಮಂಗಳವಾರ ಮಧ್ಯಾಹ್ನ ನಗರದ ಕ್ರೆಸೆಂಟ್ ರಸ್ತೆಯಲ್ಲಿರುವ ಮಲ್ಲಿಗೆ ಆಸ್ಪತ್ರೆಗೆ ದಾಖಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಇನ್ನು ತಮ್ಮ ಜೊತೆ ಸಭೆ, ಸಮಾರಂಭದಲ್ಲಿ ಭಾಗಿಯಾದ ಪಾಲಿಕೆಯ ವಿಶೇಷ ಆಯುಕ್ತರು, ಅಧಿಕಾರಿ, ಸಿಬ್ಬಂದಿಗೆ ಕ್ವಾರಂಟೈನ್‌ಗೆ ಸೂಚಿಸಲಾಗಿದ್ದು ಸೋಂಕಿನ ಲಕ್ಷಣ ಕಂಡುಬಂದರೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ಆಯುಕ್ತರು ಮನವಿ ಮಾಡಿದ್ದಾರೆ.

ಬಿಬಿಎಂಪಿಯ ಆಡಳಿತ ಜವಾಬ್ದಾರಿಯೊಂದಿಗೆ ನಗರ ಕೊರೊನಾ ಸೋಂಕು ನಿಯಂತ್ರಣದ ಮುಖ್ಯ ಅಧಿಕಾರಿಗಳಾಗಿರುವ ಪಾಲಿಕೆ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರಿಗೇ ಕೊರೊನಾ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಅವರ ಗುಣಮುಖರಾಗುವವರೆಗೆ ಪಾಲಿಕೆ ಆಡಳಿತ ಮತ್ತು ನಗರ ಕೊರೊನಾ ಸೋಂಕು ನಿಯಂತ್ರಣ ಕಾರ್ಯ ನಿರ್ವಹಣೆ ಜವಾಬ್ದಾರಿ ನಿಭಾಯಿಸಲು ರಾಜ್ಯ ಸರ್ಕಾರ ಮತ್ತೊಬ್ಬ ಹಿರಿಯ ಐಎಎಸ್‌ಯನ್ನು ನೇಮಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸಂಯುಕ್ತ ಕನ

ಸಂಯುಕ್ತ ಕರ್ನಾಟಕ

## ಪಾಲಿಕೆ ಮಾಜಿ ಸದಸ್ಯನ ವಿರುದ್ಧ ಎಫ್‌ಐಆರ್

ವ್ಯಾಪಾರಿ ಮಹಿಳೆಗೆ ಅವಾಚ್ಯವಾಗಿ ನಿಂದಿಸಿ, ಧಮ್ಕಿ ಹಾಕಿರುವ ಆರೋಪ ಮೇಲೆ ಪಾಲಿಕೆಯ ಮಾಜಿ ಸದಸ್ಯ ಧನರಾಜ್ ವಿರುದ್ಧ ವಿಲ್ಸನ್‌ಗಾರ್ಡನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಲಾಲ್‌ಬಾಗ್ ರಸ್ತೆಯ 4ನೇ ಕ್ರಾಸ್‌ನಲ್ಲಿ ಅಂಗಡಿ ಹೊಂದಿರುವ ಪೂಜಾ ಅಗರ್‌ವಾಲ್ ಎಂಬುವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಧನರಾಜ್ ಪೈಪ್‌ಗಳ ಖರೀದಿಸಲು ಸೋಮವಾರ ಮಧ್ಯಾಹ್ನ ಲಾಲ್‌ಬಾಗ್ ರಸ್ತೆಯಲ್ಲಿರುವ ಕೊಲ್ಕತ್ತಾ ಟ್ಯೂಬ್ ಮಳಿಗೆಗೆ ಹೋಗಿದ್ದರು. ಪೈಪ್‌ಗಳ ದರಪಟ್ಟಿ ಕೇಳಿದ್ದರು. ಈ ವೇಳೆ ಅಂಗಡಿ ಮಾಲೀಕ ಸಾವರ್‌ಮಲ್ ಅಗರ್‌ವಾಲ್, ಚೀಟಿಯಲ್ಲಿ ಪೈಪ್‌ಗಳ ದರ ಬರೆದು ಕೊಟ್ಟಿದ್ದರು. ಬೆಲೆ ಜಾಸ್ತಿ ಆಯಿತು. ಬೇರೆ ಅಂಗಡಿಗಳಲ್ಲಿ ಕಡಿಮೆ ಇದೆ. ನಿಮ್ಮ ಅಂಗಡಿಯಲ್ಲೇಕೆ ಹೆಚ್ಚಿನ ಹಣ ಪಡೆಯುತ್ತಿದ್ದೀರಿ ಎಂದು ಧನರಾಜ್ ಪ್ರಶ್ನಿಸಿದ್ದ. ಇದೇ ವಿಚಾರವಾಗಿ ಧನರಾಜ್ ಹಾಗೂ ಮಾಲೀಕ ಸಾವರ್‌ಮಲ್ ನಡುವೆ ಮಾತಿಗೆ ಮಾತು ಬೆಳೆದಿತ್ತು. ಗಲಾಟೆ ಬಿಡಿಸಲು ಮುಂದಾದಾಗ ಧನರಾಜ್ ಅವಾಚ್ಯವಾಗಿ ನಿಂದಿಸಿ, ಬೆದರಿಕೆ ಹಾಕಿದ್ದಾನೆ. ಆತನ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪೂಜಾ ಅಗರ್‌ವಾಲ್ ದೂರಿನಲ್ಲಿ ಆರೋಪಿಸಿದ್ದಾರೆಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಯುಕ್ತ ಕರ್ನಾ

ಸಂಯುಕ್ತ ಕರ್ನಾಟಕ

# ಸೋಂಕಿನ ಭೀತಿ–ಮಾರುಕಟ್ಟೆಗೆ ನಿರ್ಬಂಧ

## ಉಗುಳುವುದು ನಿಷೇಧ | ಮಾಸ್ಕ್-ಕೈಗಳಿಗೆ ಗ್ಲೌಸ್‌ಗಳು ಕಡ್ಡಾಯ

**ಸಂ.ಕ.ಸಮಾಚಾರ ಬೆಂಗಳೂರು**

ಬ್ರಿಟನ್‌ನಲ್ಲಿ ಕೊರೊನಾ ಹೊಸ ರೂಪಾಂತರಗೊಂಡಿರುವ ಹಿನ್ನೆಲೆಯಲ್ಲಿ ಭಾರತದಲ್ಲೂ ಆತಂಕ ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರಾಜ್ಯ ಸರ್ಕಾರ ಮಾರುಕಟ್ಟೆಗಳಿಗೆ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ.

ಜನರು ಹೆಚ್ಚು ಸೇರುವ ಹೋಲ್‌ಸೇಲ್, ರಿಟೇಲ್ ಮಾಲ್‌ಗಳಲ್ಲಿ ನಿಯಮ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ. ಎಲ್ಲಾ ಮಾರುಕಟ್ಟೆಗಳಲ್ಲಿ 6 ಅಡಿ ದೈಹಿಕ ಅಂತರ ಕಡ್ಡಾಯವಾಗಿ ಪಾಲಿಸಬೇಕು. ಮಾಸ್ಕ್ ಹಾಗೂ ಕೈಗಳಿಗೆ ಗ್ಲೌಸ್ ಕಡ್ಡಾಯವಾಗಿ ಬಳಸಬೇಕು. ಕೆಮ್ಮುವಾಗ, ಸೀನುವಾಗ ತೀವ್ರ ನಿಗಾವಹಿಸಬೇಕೆಂದು ಸೂಚಿಸಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು ನಿಷೇಧಿಸಲಾಗಿದೆ. ನಿತ್ಯ ಎಲ್ಲಾ ಅಂಗಡಿಗಳ ಮುಂದೆ ಸ್ವಚ್ಛ ಮಾಡುವುದು ಕಡ್ಡಾಯವಾಗಿದೆ. ಮಳಿಗೆಗಳ ಎಂಟ್ರಿಪಡೆಯುವ ಸ್ಥಳಗಳಲ್ಲಿ ಸ್ಯಾನಿಟೈಸರ್ ಇಡುವುದು ಕಡ್ಡಾಯವಾಗಿದೆ. ದೈಹಿಕ ಅಂತರ ಉಲ್ಲಂಘಿಸಿದರೆ ದಂಡ ವಿಧಿಸಲು ತೀರ್ಮಾನಿಸಲಾಗಿದೆ. ದಿನಬಿಟ್ಟು ದಿನ ಮಾರುಕಟ್ಟೆ, ಶಾಪ್ ತೆರೆಯುವ ಬಗ್ಗೆ ಚಿಂತನೆ ನಡೆಯುತ್ತಿದೆ. ಒಂದು ವೇಳೆ ಪ್ರಕರಣಗಳು ಹೆಚ್ಚಾದರೆ ಮಾರುಕಟ್ಟೆಯನ್ನು ಬಂದ್ ಮಾಡಲೂ ಸಹ ಚಿಂತನೆ ನಡೆದಿದೆ. ಮಾರುಕಟ್ಟೆಯ ಪ್ರತಿ ಮಳಿಗೆ ಮುಂದೆ ಕ್ಯೂ ವ್ಯವಸ್ಥೆ ಜಾರಿ ಮಾಡಲು ಮಾರುಕಟ್ಟೆ–ಮಾಲ್ ಮುಖ್ಯಸ್ಥರಿಗೆ ಸರ್ಕಾರ ಸೂಚನೆ ನೀಡಿದೆ. ಪಾರ್ಕಿಂಗ್‌ಗಳಲ್ಲಿ ನಿಯಮಿತ ವಾಹನ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ. ಗ್ರಾಹಕರ ವಾಹನಗಳಿಗೆ ಪ್ರತ್ಯೇಕ ಆಗಮನ, ನಿರ್ಗಮನ ಮಾಡಬೇಕೆಂದು ತಿಳಿಸಿದೆ.

- ಗರ್ಭಿಣಿಯರು–ಮಕ್ಕಳಿಗೆ, ಹಿರಿಯ ನಾಗರಿಕರಿಗೆ ಅಂಕುಶ
- ಚೌಕಾಕಾರ–ವೃತ್ತಾಕಾರದ ಗುರುತು ಕಡ್ಡಾಯ
- ವಾಹನಗಳಿಗೆ ಪ್ರತ್ಯೇಕ ಆಗಮನ–ನಿರ್ಗಮನದ ವ್ಯವಸ್ಥೆ
- ಅಂಗಡಿಗಳ ಮುಂದೆ ಸಾಮಾಜಿಕ ಅಂತರ ಪಾಲಿಸಬೇಕು

### ವಿದೇಶಿ ಪ್ರಯಾಣಿಕರಿಗೆ ಕೊರೊನಾ ತಪಾಸಣೆ ದರ ನಿಗದಿ

**ಬೆಂಗಳೂರು:** ವಿದೇಶದಿಂದ ಬರುವ ಪ್ರಯಾಣಿಕರಿಗೆ ಕೊರೊನಾ ತಪಾಸಣೆಗೆ ದರ ನಿಗದಿ ಮಾಡಲಾಗಿದ್ದು, 5 ಸಾವಿರ ರೂ.ಗೆ 13 ನಿಮಿಷದಲ್ಲಿ ವರದಿ ಲಭ್ಯವಾಗಲಿದೆ. ವಿಮಾನ ನಿಲ್ದಾಣದಲ್ಲೇ ಲ್ಯಾಬ್ ಆರಂಭಿಸಲಾಗಿದ್ದು, ಆರ್.ಟಿ.ಪಿ.ಸಿ.ಟಿ ಎಕ್ಸ್‌ಪ್ರೆಸ್ ಟೆಸ್ಟ್‌ಗಾಗಿ 5000 ರೂಪಾಯಿ ಪಾವತಿಸಿದರೆ, 13 ನಿಮಿಷಗಳಲ್ಲಿ ಪರೀಕ್ಷಾ ವರದಿ ಸಿಗಲಿದೆ. ಆರ್.ಟಿ.–ಪಿ.ಸಿ.ಆರ್. (ಸ್ಪೆಷಲ್ ಟರ್ನ್ ಅರೌಂಡ್) ಟೆಸ್ಟ್‌ಗಾಗಿ 2,500 ರೂಪಾಯಿ ಪಾವತಿಸಬೇಕು. ಇದರ ವರದಿ ಸಿಗಲು 5ರಿಂದ6 ಗಂಟೆ ಕಾಯಬೇಕಾಗುತ್ತದೆ. ಆರ್.ಟಿ.ಪಿ.ಸಿ.ಆರ್(ಸಾಮಾನ್ಯ) ಟೆಸ್ಟ್‌ಗಾಗಿ 800 ರೂ. ಪಾವತಿಸಬೇಕು, ಈ ವರದಿ ಪಡೆಯಲು 24 ಗಂಟೆ ಕಾಯಬೇಕಾಗುತ್ತದೆ. ಆ್ಯಸ್ಟರ್ ಏರ್ಪೋರ್ಟ್ ಮೆಡಿಕಲ್ ಸೆಂಟರ್‌ನಲ್ಲಿ ಆರ್.ಟಿ.ಪಿ.ಸಿ.ಆರ್ ಟೆಸ್ಟ್‌ಗಾಗಿ 1,200 ರೂಪಾಯಿ ಪಾವತಿಸಿದ್ದಾರೆ. 24 ಗಂಟೆಯಲ್ಲಿ ವರದಿ ಪ್ರಯಾಣಿಕರ ಕೈಗೆ ಸಿಗಲಿದೆ. ಆರ್‌ಟಿ ಪಿಸಿಆರ್ ಟೆಸ್ಟ್‌ನಲ್ಲಿ ಪಾಸಿಟಿವ್ ಬಂದರೆ ಪ್ರಯಾಣಿಕರನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಗೆ ಕಳಿಸಲಾಗುತ್ತದೆ ಮತ್ತು ವರದಿ ನೆಗೆಟಿವ್ ಬಂದರೆ 14 ದಿನಗಳ ಹೋಮ್ ಕ್ವಾರಂಟೈನ್‌ಗೆ ಒಳಗಾಗಬೇಕು.

## ವಿಮಾನ ನಿಲ್ದಾಣದಲ್ಲಿ ತಪಾಸಣೆ ಶುರು

**ಬೆಂಗಳೂರು:** ಕೊರೊನಾ ಸೋಂಕು ರೂಪಾಂತರವಾಗಿರುವ ಹಿನ್ನೆಲೆಯಲ್ಲಿ ವಿದೇಶದಿಂದ ಬೆಂಗಳೂರಿಗೆ ಬರುತ್ತಿರುವ ಪ್ರಯಾಣಿಕರಿಗೆ ಕಡ್ಡಾಯವಾಗಿ ಕೊರೊನಾ ತಪಾಸಣೆ ಮಾಡಲಾಗುತ್ತಿದೆ.

ಕೊರೊನಾ ಸೋಂಕಿನ ಹಾವಳಿ ಕಡಿಮೆಯಾಗಿ ಯಥಾಸ್ಥಿತಿಗೆ ಜೀವನ ಮರಳುತ್ತಿರುವ ಸಮಯದಲ್ಲಿ ಕೊರೊನಾ ವೈರಸ್ ರೂಪಾಂತರವಾಗುವ ಮೂಲಕ ಜನರಲ್ಲಿ ಆತಂಕ ಮೂಡಿಸಿದೆ. ಅದರಲ್ಲೂ ವಿದೇಶದಿಂದ ಬರುತ್ತಿರುವ ಪ್ರಯಾಣಿಕರಿಂದ ಮತ್ತೆ ಸೋಂಕು ಹಬ್ಬುವ ಸಾಧ್ಯತೆಗಳನ್ನು ಮನಗಂಡು ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಟ್ಟೆಚ್ಚರವಹಿಸಲಾಗಿದ್ದು ವಿದೇಶದಿಂದ ಬರುವ ಎಲ್ಲ ಪ್ರಯಾಣಿಕರಿಗೆ ಕೊರೊನಾ ತಪಾಸಣೆ ಮಾಡಲಾಗುತ್ತಿದೆ. ಸೋಮವಾರ ಎರಡು ವಿಮಾನಗಳಲ್ಲಿ 454 ಪ್ರಯಾಣಿಕರು ಬೆಂಗಳೂರಿಗೆ ಆಗಮಿಸಿದ್ದು, ಇವರಲ್ಲಿ 211 ಮಂದಿ ಬೆಂಗಳೂರಿನವರೇ ಆಗಿದ್ದಾರೆ. ಇವರೆಲ್ಲರನ್ನೂ ಪತ್ತೆ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಹಾಗೆಯೇ ಅವರ ಸಂಪರ್ಕಿತರನ್ನೂ ಪತ್ತೆ ಮಾಡಲು ಆರೋಗ್ಯ ಕಾರ್ಯಕರ್ತರನ್ನು ನಿಯೋಜನೆ ಮಾಡಲಾಗಿದೆ. ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈಗಾಗಲೇ ಕೊರೊನಾ ತಪಾಸಣೆ ಲ್ಯಾಬ್ ಇದ್ದು, ಇದರ ಮೂಲಕವೇ ಕೊರೊನಾ ತಪಾಸಣೆ ಮಾಡಲಾಗುತ್ತದೆ. ಸೋಮವಾರ ಸಂಜೆಯಿಂದ ಬೆಂಗಳೂರಿಗೆ ಬರುತ್ತಿರುವ ಎಲ್ಲ ಪ್ರಯಾಣಿಕರಿಗೆ ಆರ್‌ಟಿ–ಪಿಸಿಆರ್ ತಪಾಸಣೆ ಮಾಡಲಾಗುತ್ತಿದೆ.

### ಹಿಂದಿನಂತೆಯೇ ಕ್ವಾರಂಟೈನ್

ವಿದೇಶದಿಂದ ಬರುವ ಪ್ರಯಾಣಿಕರು ಮನೆಗೆ ತೆರಳುವಂತಿಲ್ಲ. ಕ್ವಾರಂಟೈನ್‌ನಲ್ಲಿ ಇರಬೇಕಾಗುತ್ತದೆ. ಪಾಸಿಟಿವ್ ಬಂದಲ್ಲಿ ನಿಗದಿತ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿ ಅಲ್ಲಿ 14 ದಿನ ಇರಬೇಕಾಗುತ್ತದೆ. ನೆಗೆಟಿವ್ ಬಂದಲ್ಲಿ 7 ದಿನ ಕ್ವಾರಂಟೈನ್‌ನಲ್ಲಿ ಇರಬೇಕಾಗುತ್ತದೆ.

ಹೊಸ ದಿಗಂತ



## ಬಿಬಿಎಂಪಿ: ಪ್ರವೇಶ ಪಡೆದ 12,196 ವಿದ್ಯಾರ್ಥಿಗಳು | 2184 ಮಕ್ಕಳು ಎಸ್‌ಎಸ್‌ಎಲ್‌ಸಿಗೆ ಪ್ರವೇಶ

# ಶಾಲಾ-ಕಾಲೇಜುಗಳಲ್ಲಿ ಪ್ರವೇಶಾತಿ ಹೆಚ್ಚಳ

• ಡಿ.ವಿ. ಸಂಜೀವ

**ಬೆಂಗಳೂರು:** ಬಿಬಿಎಂಪಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಶೇ.10ರಷ್ಟು ಹೆಚ್ಚಳವಾಗುತ್ತಿದ್ದು, ಈ ಬಾರಿ ಒಟ್ಟು 12,196 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ.

ಈ ಭಾರಿ ಬಿಬಿಎಂಪಿಯ 33 ಪ್ರೌಢಶಾಲೆಗಳಲ್ಲಿ 868 ವಿದ್ಯಾರ್ಥಿಗಳು, 1316 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 2184 ಮಕ್ಕಳು ಎಸ್‌ಎಸ್‌ಎಲ್‌ಸಿಗೆ ಪ್ರವೇಶ ಪಡೆದಿದ್ದರೆ, 15 ಬಿಬಿಎಂಪಿ ಪಿಯು ಕಾಲೇಜುಗಳಲ್ಲಿ 395 ಹುಡುಗರು, 1675 ಹುಡುಗಿಯರು ದ್ವಿತೀಯ ಪಿಯುಸಿ ಪ್ರವೇಶಾತಿ ಪಡೆದಿದ್ದು, ಹಿಂದಿನ ವರ್ಷಕ್ಕಿಂತ ಈ ವರ್ಷ ಶೇ.10 ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗಿದೆ. ಕೋವಿಡ್ 19 ಹಿನ್ನೆಲೆಯಲ್ಲಿ ಕಳೆದ ಎಂಟು ತಿಂಗಳಿಂದ ಮುಚ್ಚಲ್ಪಟ್ಟಿದ್ದ ಶಾಲಾ ಕಾಲೇಜು ರಾಜ್ಯಾದ್ಯಂತ ಜ.1 ರಿಂದ ಪುನರಾರಂಭಿಸಲಾಗುತ್ತಿದೆ. ಹೀಗಾಗಿ ಬಿಬಿಎಂಪಿಯು ಮಕ್ಕಳ ರಕ್ಷಣೆಗೆ ಎಲ್ಲಾ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

**2 ಪಾಳಿಯಲ್ಲಿ ತರಗತಿ:** ಶಾಲೆಗಳಿಗೆ ಎರಡು ದಿನಗಳಿಗೊಂದು ಬಾರಿ ಸ್ಯಾನಿಟೈಸರ್ ಮಾಡುವುದು. ಪ್ರತಿದಿನ ಮಕ್ಕಳಿಗೆ ಜ್ವರ ತಪಾಸಣೆ ನಡೆಸುವುದು. ಮಕ್ಕಳಿಗೆ ಮನೆಯಿಂದಲೇ ಕುಡಿಯುವ ನೀರು




64 ಒಟ್ಟು ಶಾಲಾ ಕಾಲೇಜುಗಳು | 12196 ಒಟ್ಟು ವಿದ್ಯಾರ್ಥಿಗಳು | 820 ಒಟ್ಟು ಶಾಲಾ ಕಾಲೇಜುಗಳು

ತರಲು ಸೂಚನೆ ನೀಡುವುದು. ಒಂದು ಕ್ಲಾಸ್ ರೂಮ್‌ನಲ್ಲಿ ಗರಿಷ್ಟ 15 ವಿದ್ಯಾರ್ಥಿಗಳಂತೆ ಎರಡು ಪಾಳಿಯಲ್ಲಿ ತರಗತಿ ನಡೆಸುವುದು. ಮಕ್ಕಳಿಂದ ಮಕ್ಕಳಿಗೆ ಸಾಮಾಜಿಕ ಅಂತರ ಕಾಯ್ದುಕೊಂಡು ತರಗತಿ ನಡೆಸಲು ಬಿಬಿಎಂಪಿ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

### 5 ಕೋಟಿ ವೆಚ್ಚದಲ್ಲಿ 3 ಹೊಸ ಶಾಲೆ ಆರಂಭ

ಬಿಬಿಎಂಪಿ ವ್ಯಾಪ್ತಿಯ ಹೊರವಲಯಗಳಲ್ಲಿ ಬಿಬಿಎಂಪಿ ಶಾಲೆಗಳ ಸಂಖ್ಯೆ ಕಡಿಮೆ ಇರುವುದರಿಂದ ಮಹದೇವಪುರ ಹಾಗೂ ರಾಜರಾಜೇಶ್ವರಿನಗರ ವಲಯದಲ್ಲಿ ಸುಮಾರು 5 ಕೋಟಿ ರೂಪಾಯಿ ವೆಚ್ಚದಲ್ಲಿ ಮೂರು ಹೊಸ ಶಾಲೆಗಳನ್ನು ಆರಂಭಿಸಲಾಗುತ್ತಿದೆ. ನಗರದ ಮುನ್ನೆಕೊಳಲು, ದೊಡ್ಡನೆಕ್ಕುಂದಿ ಹಾಗೂ ಕೆಂಗೇರಿಯಲ್ಲಿ ಹೊಸದಾಗಿ ಶಾಲೆಗಳು ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

**ವಾರ್ಷಿಕ 20 ಕೋಟಿ ರೂ. ನಿರ್ವಹಣಾ ವೆಚ್ಚ:** ಪಾಲಿಕೆ ವ್ಯಾಪ್ತಿಯೊಳಗಿನ 36 ಬಿಬಿಎಂಪಿ ಶಾಲೆಗಳಿಗೆ ವಾರ್ಷಿಕ 20 ಕೋಟಿ ರೂ. ನಿರ್ವಹಣಾ ವೆಚ್ಚ ನೀಡಲಾಗುತ್ತಿದೆ. ಸುಮಾರು 80ರಿಂದ 100 ವರ್ಷದ ಹಳೆಯ ಶಾಲೆಗಳು ಹೆಚ್ಚಾಗಿರುವುದರಿಂದ ಕಾಲ ಕಾಲಕ್ಕೆ ನಿರ್ವಹಣೆ ಅವಶ್ಯವಾಗಿದೆ. ಬಿಬಿಎಂಪಿಯಲ್ಲಿ ಈ ಹಣದಲ್ಲಿ ಮಾಸಿಕ ಸುಮಾರು 2 ಸಾವಿರದಿಂದ 5 ಸಾವಿರ ರೂ.ವರೆಗೆ ವಿದ್ಯುತ್ ಬಿಲ್, 2 ಸಾವಿರ ರೂ.ವರೆಗೆ ಕುಡಿಯುವ ನೀರಿನ ಬಿಲ್, ಶೌಚಗೃಹ ಸ್ವಚ್ಛತೆಗೆ 500 ರೂಪಾಯಿ ಸೇರಿದಂತೆ ಇನ್ನಿತರೆ ನಿರ್ವಹಣೆ ಸೇರಿ ವಾರ್ಷಿಕ 20 ಕೋಟಿ ರೂಪಾಯಿ ನಿರ್ವಹಣಾ ವೆಚ್ಚ ಮಾಡಬೇಕಾಗುತ್ತದೆ.

> ಬಿಬಿಎಂಪಿ ಶಾಲೆಗಳಿಗೆ ಬರುವ ಮಕ್ಕಳು ಬಡವರಾಗಿದ್ದು, ಅವರಿಗೆ ಎಲ್ಲಾ ರೀತಿ ವ್ಯವಸ್ಥೆ ನೀಡಿ ಉತ್ತಮ ರೀತಿಯಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಹೀಗಾಗಿ, ಬಿಬಿಎಂಪಿ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುತ್ತಿದೆ.
> ■ ನಾಗೇಂದ್ರ ನಾಯಕ್, ಸಹಾಯಕ ಆಯುಕ್ತ (ಶಿಕ್ಷಣ ವಿಭಾಗ)

### ಬಿಬಿಎಂಪಿ ಶಾಲಾ-ಕಾಲೇಜುಗಳ ಮಾಹಿತಿ

| ಶಾಲಾ ಕಾಲೇಜುಗಳು | ವಿದ್ಯಾರ್ಥಿಗಳು |
|---|---|
| 16 ಪ್ರಾಥಮಿಕ ಶಾಲೆ | 2224 |
| 33 ಪ್ರೌಢಶಾಲೆ | 5710 |
| 15 ಪಿಯುಸಿ | 4562 |

ಹೊಸ ದಿಗಂತ

ಹೊಸ ದಿಗಂತ
12
23 Dec 2020

# ಬಿಬಿಎಂಪಿ ವ್ಯಾಪ್ತಿ ಹೆಚ್ಚಿಸುವ ವಿಧೇಯಕಕ್ಕೆ ರಾಜ್ಯಪಾಲರ ಅಂಕಿತ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿ ಹೆಚ್ಚಿಸುವ ಮತ್ತು ಆಡಳಿತದಲ್ಲಿ ಬದಲಾವಣೆ ತರುವ ಬಿಬಿಎಂಪಿ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಇದರ ಬೆನ್ನಲ್ಲೇ ಸರ್ಕಾರ ಅಧಿಸೂಚನೆ ಹೊರಡಿಸಿದೆ.



ಇತ್ತೀಚೆಗಷ್ಟೇ ವಿಧಾನ ಮಂಡಲದ ಅಧಿವೇಶನದಲ್ಲಿ ಬಿಬಿಎಂಪಿ ವಿಧೇಯಕಕ್ಕೆ ಅಂಗೀಕಾರ ಪಡೆಯಲಾಗಿತ್ತು. ಇದನ್ನು ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗಿತ್ತು. ವಿಧೇಯಕವನ್ನು ಪರಾಮರ್ಶಿಸಿ ರಾಜ್ಯಪಾಲರು ಒಪ್ಪಿಗೆ ಸೂಚಿಸಿದ್ದಾರೆ. ಬಿಬಿಎಂಪಿ ಕಾಯ್ದೆ ಜಾರಿ ಹಾಗೂ ಬಿಬಿಎಂಪಿ ಚುನಾವಣೆ ನಡೆಸುವ ಸಂಬಂಧ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಸರ್ಕಾರ ಬಿಬಿಎಂಪಿ ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸುವ ವಾರ್ಡ್ ಮರು ವಿಂಗಡನೆ ಕಾರ್ಯ ಪ್ರಾರಂಭಿಸಲು ವೇದಿಕೆ ಸಿದ್ಧಗೊಂಡಿದೆ.

## ಕಾಯ್ದೆಯ ಮುಖ್ಯಾಂಶ

ನೂತನ ಕಾಯ್ದೆಯ ಪ್ರಕಾರ ಬಿಬಿಎಂಪಿಯ ವ್ಯಾಪ್ತಿ ಮತ್ತಷ್ಟು ಹಿಗ್ಗಲಿದ್ದು, ಮೇಯರ್ ಮತ್ತು ಉಪಮೇಯರ್ ಅಧಿಕಾರಾವಧಿ ಈಗಿನ ಒಂದು ವರ್ಷದಿಂದ ಎರಡೂವರೆ ವರ್ಷಕ್ಕೆ ಹೆಚ್ಚಾಗಲಿದೆ. ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198 ರಿಂದ 243ಕ್ಕೆ ಏರಿಕೆಯಾಗಲಿದೆ. ಬಿಬಿಎಂಪಿ ಸುತ್ತಲೂ ಇರುವ 1 ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮ, ಗ್ರಾಪಂಗಳ ಪ್ರದೇಶ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಲಿವೆ. ಪಾಲಿಕೆಯನ್ನು 15 ವಲಯಗಳನ್ನಾಗಿ ಮರುವಿಂಗಡನೆ ಮಾಡಲಿದ್ದು, ಪ್ರತಿ ವಲಯಗಳಿಗೂ ಹಿರಿಯ ಅಧಿಕಾರಿಗಳ ಸಮಿತಿ ರಚನೆಯಾಗಲಿದೆ. ಬಿಬಿಎಂಪಿ ಆಯುಕ್ತರ ಹುದ್ದೆಯನ್ನು ಮುಖ್ಯ ಆಯುಕ್ತರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗುತ್ತದೆ. ಪ್ರಧಾನ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿಯನ್ನು ಮುಖ್ಯ ಹುದ್ದೆಗೆ ನೇಮಕ ಮಾಡಲಿದ್ದು, ಮುಖ್ಯ ಆಯುಕ್ತರ ಅಧಿಕಾರಾವಧಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿಯೋಜಿಸಲಾಗುತ್ತದೆ.

ಹೊಸ ದಿಗಂತ

# ವೈಟ್‌ಟಾಪಿಂಗ್: ಸಂಚಾರ ಬದಲಾವಣೆ

**ಬೆಂಗಳೂರು:** ಹೆಬ್ಬಾಳದಿಂದ ನಾಗವಾರ ಕಡೆಗೆ ಸಾಗುವ ರಿಂಗ್ ರಸ್ತೆ ಮಾರ್ಗದ ವೀರಣ್ಣಪಾಳ್ಯ ಮೇಲ್ಸೇತುವೆಯ ಭಾಗದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದ್ದು, ಪ್ರಯಾಣಿಕರು ಸಹಕರಿಸುವಂತೆ ಬಿಬಿಎಂಪಿ ಮನವಿ ಮಾಡಿದೆ.

**ಒಟ್ಟು 680 ಮೀ. ರಸ್ತೆಯಲ್ಲಿ ವೈಟ್ ಟಾಪಿಂಗ್**

ಒಟ್ಟು ಎರಡು ಹಂತದಲ್ಲಿ ಕಾಮಗಾರಿ ನಡೆಯಲಿದೆ. ಮೊದಲ ಹಂತದಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ಮೇಲ್ಸೇತುವೆ ಒಂದು ಪಥದಲ್ಲಿ ಡಿ.22ರಿಂದ ಜ.10ರ ವರೆಗೆ ಕಾಮಗಾರಿ ನಡೆಸಲಾಗುತ್ತದೆ. ಈ ಮಾರ್ಗದಲ್ಲಿ ಸಾಗುವ ವಾಹನಗಳು ಸರ್ವಿಸ್ ರಸ್ತೆಯ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಜ.11ರ ನಂತರ ಎರಡನೇ ಹಂತದಲ್ಲಿ ನಾಗವಾರದಿಂದ ಹೆಬ್ಬಾಳ ಕಡೆ ಬರುವ ಪಥದಲ್ಲಿ ಕಾಮಗಾರಿ ನಡೆಸಲಾಗುವುದು. ಒಟ್ಟು 680 ಮೀ. ರಸ್ತೆಯಲ್ಲಿ ವೈಟ್ ಟಾಪಿಂಗ್ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಕೇಂದ್ರ, ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎನ್.ಚಂದ್ರಶೇಖರ್ ತಿಳಿಸಿದ್ದಾರೆ.

ಹೊಸ ದಿಗಂತ

ಹೊಸ ದಿಗಂತ 12
23 Dec 2020

# ಮಾಜಿ ಕಾರ್ಪೊರೇಟರ್ ಧನ್‌ರಾಜ್ ವಿರುದ್ಧ ದೂರು

**ಬೆಂಗಳೂರು:** ಹಾರ್ಡ್‌ವೇರ್ ಅಂಗಡಿ ಮಾಲೀಕರೊಬ್ಬರಿಗೆ ಜೀವ ಬೆದರಿಕೆಯೊಡ್ಡಿದ ಆರೋಪದಡಿ ಬಿಬಿಎಂಪಿಯ ಮಾಜಿ ಕಾರ್ಪೊರೇಟರ್ ಧನ್‌ರಾಜ್‌ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದೂರು



ದಾಖಲಿಸಲಾಗಿದೆ. ಲಾಲ್ ಬಾಗ್ ರಸ್ತೆಯಲ್ಲಿರುವ ಕಲ್ಪತ್ ಟ್ಯೂಬ್ ಅಂಗಡಿ ಮಾಲೀಕರಾದ ಪೂಜಾ ದೂರು ನೀಡಿದ್ದಾರೆ. ಧನ್ ರಾಜ್ ಕೆಲ ದಿನದ ಹಿಂದೆ ತಮ್ಮ ಅಂಗಡಿಗೆ ಬಂದು ಪೈಪ್ ಬೆಲೆ ಕೇಳಿದ್ದರು. ಬೇರೆ ಅಂಗಡಿಯಲ್ಲಿ ಕಡಿಮೆ ಇದ್ದು, ನಿಮ್ಮಲ್ಲಿ ಯಾಕೆ ಬೆಲೆ ಹೆಚ್ಚಿದೆ ಎಂದು ಏರು ಧ್ವನಿಯಲ್ಲಿ ಪ್ರಶ್ನಿಸಿದ್ದರು. ತಾನು ಮಾಜಿ ಕಾರ್ಪೊರೇಟರ್ ಆಗಿದ್ದು, ಸಾವಿರಾರರು ಜನರು ತನಗೆ ಮತ ಹಾಕಿ ಗೆಲ್ಲಿಸಿದ್ದಾರೆ. ಮನಸ್ಸು ಮಾಡಿದರೆ ಮಹಿಳೆಯರನ್ನು ಕರೆಸಿ ಧರಣಿ ಮಾಡಿಸುವೆ ಎಂದು

ಧಮ್ಕಿ ಹಾಕಿ ಅವಾಚ್ಯವಾಗಿ ನಿಂದಿಸಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ.ದೂರು ಆಧರಿಸಿ ಪೊಲೀಸರು ಧನ್‌ರಾಜ್ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆಯನ್ನು ಕೈಗೆತ್ತಿಕೊಂಡಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ಆಯುಕ್ತ ಮಂಜುನಾಥ್ ಪ್ರಸಾದ್‌ಗೆ ಕೋವಿಡ್ ದೃಢ

ಬೆಂಗಳೂರು, ಡಿ.22: ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್‌ಗೆ ಕೋವಿಡ್ ದೃಢಪಟ್ಟಿದ್ದು, ಹೋಂ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ.

ಕೋವಿಡ್ ಸೋಂಕಿನ ಯಾವುದೇ ಲಕ್ಷಣಗಳು ಕಾಣಿಸಿಕೊಂಡಿಲ್ಲ ಹಾಗೂ ಆರೋಗ್ಯವಾಗಿದ್ದಾರೆ ಎಂದು ಆಯುಕ್ತರ ಕಚೇರಿ ಸಿಬ್ಬಂದಿ ದೃಢಪಡಿಸಿದ್ದಾರೆ. ಆಯುಕ್ತರಿಗೆ ಕೋವಿಡ್ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ಆಯುಕ್ತರೊಂದಿಗೆ ಸಭೆ ಹಾಗೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಲ್ಲ ಸಿಬ್ಬಂದಿ ಹಾಗೂ ಆಯುಕ್ತರ ಜೊತೆ ಸಂಪರ್ಕದಲ್ಲಿದ್ದ ಸಾರ್ವಜನಿಕರು ಹೋಂ ಕ್ವಾರಂಟೈನ್‌ಗೆ ಒಳಗಾಗಲು ಮನವಿ ಮಾಡಿದ್ದಾರೆ.

Bengaluru Edition
Dec 23, 2020 Page No.8

ಸಂಜೆವಾಣಿ
1982

# ಬಿಬಿಎಂಪಿ ಹೊಸ ಕಾಯ್ದೆ ರಾಜ್ಯಪಾಲರ ಅನುಮತಿ



ಬೆಂಗಳೂರು.ಡಿ.22:ಬಿಬಿಎಂಪಿ ರೂಪಿಸಿರುವ ನೂತನ ಕಾಯ್ದೆಗೆ ರಾಜ್ಯಪಾಲ ವಜುಭಾಯಿ ವಾಲಾ ಅನುಮೋದನೆ ನೀಡಿದ್ದು, ನೂತನ ಕಾಯ್ದೆಯಿಂದ ಮೇಯರ್ ಮತ್ತು ಉಪಮೇಯರ್ ಅಧಿಕಾರಾವಧಿ ಹೆಚ್ಚಾಗಲಿದೆ.

ಬಿಬಿಎಂಪಿಯಿಂದ 1 ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮ, ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ನಗರಸಭೆ ಪಾಲಿಕೆ ವ್ಯಾಪ್ತಿಗೆ ಬರಲಿವೆ.

ಬಿಬಿಎಂಪಿ ಮೇಯರ್ ಹಾಗೂ ಉಪಮೇಯರ್ ಅಧಿಕಾರಾವಧಿ ಒಂದರಿಂದ ಎರಡೂವರೆ ವರ್ಷಗಳಿಗೆ ಹೆಚ್ಚಳಗೊಳ್ಳಲಿದೆ. ಬಿಬಿಎಂಪಿ ವಾರ್ಡ್ ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಏರಿಕೆಯಾಗಲಿದೆ ಬಡವರಿಗೆ ಶೇ. 50ರಷ್ಟು ಕಸ ಶುಲ್ಕ ರಿಯಾಯಿತಿ ನೀಡಲಾಗುವುದು, ಮೇಯರ್ ಹಾಗೂ ಉಪ ಮೇಯರ್ ಕಾರ್ಯವ್ಯಾಪ್ತಿಗಳ ನಿಗದಿ ಮಾಡಲಾಗುವುದು. ಮೇಯರ್ ಯಾವುದಾದರೂ ವರದಿ ಅಥವಾ ಮಾಹಿತಿ ಕೇಳಿದರೆ 15 ದಿನಗಳೊಳಗಾಗಿ ಮುಖ್ಯ ಆಯುಕ್ತರು ನೀಡಬೇಕು.,ಬಿಬಿಎಂಪಿಗೆ ಪ್ರಸ್ತುತ ಇರುವ ಬಿಬಿಎಂಪಿ ಆಯುಕ್ತ ಹುದ್ದೆಯನ್ನು ಮುಖ್ಯ ಹುದ್ದೆಯಾಗಿ ಮಾಡಬೇಕು.7. ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದವರನ್ನು ಆಯುಕ್ತರಾಗಿ ನೇಮವಾಗಲಿದ್ದಾರೆ.

ಆಯುಕ್ತರ ಅಧಿಕಾರಾವಧಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿಯೋಜನೆ ಮಾಡಬೇಕು. ಎರಡು ವರ್ಷದೊಳಗಾಗಿ ಮುಖ್ಯ ಆಯುಕ್ತರ ಆಡಳಿತ ಹಾಗೂ ನಿರ್ವಹಣೆ ಸರ್ಕಾರಕ್ಕೆ ತೃಪ್ತಿಕರವಾದರೆ, ಆಯುಕ್ತರ ಅಧಿಕಾರ ಅವಧಿಯನ್ನು ಮುಂದುವರಿಸುವ ಅಧಿಕಾರ ಸರ್ಕಾರಕ್ಕೆ ಇರಲಿದೆ, ಅವಧಿಗೆ ಮೊದಲು ವರ್ಗಾವಣೆ ಮಾಡಬೇಕಾದರೆ ಬಿಬಿಎಂಪಿ ಮೇಯರ್ ಅವರಿಗೆ ಕಾರಣಗಳನ್ನು ತಿಳಿಸಬೇಕು, ವಲಯ ಆಯುಕ್ತರು ಸರ್ಕಾರದ ಕಾರ್ಯದರ್ಶಿ ಹಂತಕ್ಕಿಂತ ಕಡಿಮೆ ಇಲ್ಲದ ಅಧಿಕಾರಿಯಾಗಿರಬೇಕು. ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ. ನಗರದಲ್ಲಿ ಸಾರ್ವಜನಿಕರಿಗೆ ತುರ್ತಾಗಿ ಸ್ಪಂದಿಸುವ ಉದ್ದೇಶದಿಂದ ವಿಪತ್ತು ನಿರ್ವಹಣಾ ಸಮಿತಿ ರಚನೆಯಾಗಲಿದೆ,ಏರಿಯಾ ಸಭಾ ಅಸ್ತಿತ್ವಕ್ಕೆ ಬರಲಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವ ಉದ್ದೇಶ ದಿಂದ ವಿಧಾನಸಭಾ ಕ್ಷೇತ್ರ?ವಾರು ಹಾಗೂ ವಾರ್ಡ್‌ನಲ್ಲಿ 'ಪ್ರಾಂತ್ಯ ಸಭೆ'ಗಳು ಅಥವಾ ಏರಿಯಾ ಸಭಾಗಳ ರಚನೆಯಾಗಲಿದೆ ಸೇರಿದಂತೆ ಆನೇಕ ಬದಲಾವಣೆಗಳಾಗಲಿವೆ.

ಸಂಜೆವಾಣಿ
1982

# ಬಿಬಿಎಂಪಿ ಹೊಸ ಕಾಯ್ದೆ ಮಾಜಿಗಳ ತಕರಾರು

ಬೆಂಗಳೂರು.ಡಿ22–ಬಿಬಿಎಂಪಿ ನೂತನ ಕಾಯ್ದೆ ಕುರಿತಂತೆ ಮಾಜಿ ಸದಸ್ಯರು ಸೇರಿದಂತೆ ಆಡಳಿತರೂಡ ಪಕ್ಷ.ಜೆಡಿಎಸ್. ಹಾಗೂ ವಿರೋದ ಪಕ್ಷದ ಹಿರಿಯ ಸದಸ್ಯರುಗಳು ಅಸಮಾಧಾನ ವ್ಯಕ್ತ ಪಡಿಸಿದ್ದಾರೆ.

ಕಾಂಗ್ರೆಸ್‌ನ ಎಮ್ ಶಿವರಾಜ್ ಅವರು ನೂತನ ಕಾಯ್ದೆಯಲ್ಲಿ ಹೊಸದೇನು ಇಲ್ಲ. ಅಧಿಕಾರ ವಿಕೇಂದ್ರೀಕರಣ ವನ್ನು ಮೊಟಕುಗೊಳಿಸಲಾಗಿದೆ .ಹಿಂದಿನ ಕೆ.ಎಂಸಿ ಕಾಯ್ದೆಯ ಮುಂದುವರಿದ ಭಾಗವಾಗಿದೆ. ನಗರದ ಸಮಸ್ಸೆಗಳಿಗೆ ಸ್ಪಂದಿಸುವ ಅಧಿಕಾರವನ್ನು ಸದಸ್ಯರಿಂದ ಕಿತ್ತುಕೊಳ್ಳಲಾಗಿದೆ ಕಾಯ್ದೆಯನ್ನು ಮತ್ತೊಮ್ಮೆ ಸರ್ಕಾರ ಪರಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸಾರ್ವಜನಿಕರ ಅಭಿಪ್ರಾಯ ವನ್ನು ತೆಗೆದುಕೊಂಡು ಮಂಡಿಸಬೇಕಾಗಿದೆಎಂದು ತಿಳಿಸಿದ್ದಾರೆ. ಜೆ.ಡಿಎಸ್ ನ ನಗರ ಅದ್ಯಕ್ಷರಾದ ಆರ್ ಪ್ರಕಾಶ್ ರವರ ಪ್ರಕಾರ ಚುನಾವಣೆಯನ್ನು ಮುಂದೂಡುವ ಉದ್ದೇಶ ಸ್ಪಷ್ಟವಾಗಗಿದೆ. ವೈಜ್ಞಾನಿಕವಾಗಿ ವಾಗಿ ಈ ಕಾಯ್ದೆ ರೂಪಿತವಾಗಿಲ್ಲ.ಸದಸ್ಯರ ಅಧಿಕಾರವನ್ನ ಕಿತ್ತುಕೊಂಡಿದೆ.ಸಮಗ್ರವಾಗಿ ಈ ಕಾಯ್ದೆ ತಿದ್ದುಪಡಿ ಆಗಬೇಕಾಗಿದೆ. ಶಾಸಕರ ಹಾಗೂ ಮಂತ್ರಿಗಳ ಇಚ್ಚೆಗೆ ತಕ್ಕಂತೆ ಕಾಯ್ದೆಯಾಗಿದೆ– ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಬಿಜೆಪಿ ಯ ಬಹುತೇಕ ಸದಸ್ಯರುಗಳು ಈ ಕಾಯ್ದೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಿಬಿಎಂಪಿ ಸದಸ್ಯರ ಅಧಿಕಾರವನ್ನ ಮೊಟಕುಗೊಳಿಸುವ ಕಾಯ್ದೆಯಾಗಿದೆ.

ಮೇಯರ್ ಅಧಿಕಾರವಧಿ ಹೆಚ್ಚಿಸಿದ್ದಾರೆ ಹೊರತು. ವಾರ್ಡ್ ಕಮಿಟಿಯ ಅಧಿಕಾರವನ್ನು ಶಾಸಕರಿಗೆ ನೀಡಲಾಗಿದ್ದು ಸದಸ್ಯರ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸಲಾಗಿದೆ. ಅಧಿಕಾರವಿಲ್ಲವೆಂದರೆ. ಸಮಸ್ಯೆಗಳು ಉಳಿಯುತ್ತದೆ. ಜನರ ಸಣ್ಣ ಪುಟ್ಟ ಸಮಸ್ಸೆಗಳಿಗೆ ಸ್ಪಂದಿಸಿ ಸ್ಥಳದಲ್ಲಿಯೇ ಪರಿಹಾರ ಕಂಡುಹಿಡಿಯುತ್ತೇವೆ. ಈ ಕಾಯ್ದೆಯಲ್ಲಿ ಅವಕಾಶ ವಿಲ್ಲ 10 ಲಕ್ಷರೂಪಾಯಿ ಕಾಮಗಾರಿಗೂ ವಾರ್ಡ್ ಸಮಿತಿಯ ಒಪ್ಪಿಗೆ ಪಡೆಯಬೇಕು.ಸದಸ್ಯರುಗಳ ಅಧಿಕಾರವನ್ನು ಕಿತ್ತುಕೊಳ್ಳುವ ಯತ್ನ ವಾಗಿದೆ ಅಂಚೆ ಸರಬರಾಜು ಮಾಡುವ ನೌಕರನ ಸ್ಥಿತಿ ಸದಸ್ಯರಿಗೆ ಬರುತ್ತದೆ ಈ ಕಾಯ್ದೆಯಿಂದ ಕೆಲವು ತಿದ್ದುಪಡಿ ಮಾಡಲೇಬೇಕು ಎಂದು ಹಿರಿಯ ಸದಸ್ಯರುಗಳು ಸರ್ಕಾರಕ್ಕೆ ಆಗ್ರಹಪಡಿಸಿದ್ದಾರೆ. ಮಾಜಿ ಮೇಯರ್ ಗಳ ಮುಖಂಡತ್ವದಲ್ಲಿ ಸಿ ಎಂ ಬೇಟಿಮಾಡಿ ಕಾಯ್ದೆ ತಿದ್ದುಪಡಿಗೆ ಒತ್ತಾಯಿಸಲಾಗುವುದು ಎಂದು ಹಿರಿ ಯ ಸದಸ್ಯರು ತಿಳಿಸಿದಾ ರೆ.